ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಶನಿವಾರ, ಮಾರ್ಚ್ 30, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 319 RNI : 27369/75

janathavani@mac.com
www.janathavani.com
08192 254736 91642 99999

## ಸಿ-ವಿಜಿಲ್ ಮೂಲಕ 79 ಸಾವಿರ ದೂರು

ನವದೆಹಲಿ, ಮಾ. 29 – ತನ್ನ ಸಿ-ವಿಜಿಲ್ ಆಪ್ ಮೂಲಕ ಇದುವರೆಗೂ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಸಂಬಂಧ 79 ಸಾವಿರಕ್ಕೂ ಹೆಚ್ಚು ದೂರುಗಳು ಬಂದಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ದೂರುಗಳ ಪೈಕಿ ಶೇ.99ರಷ್ಟನ್ನು ಬಗೆಹರಿಸಲಾಗಿದೆ. ಶೇ.89ರಷ್ಟು ದೂರುಗಳನ್ನು 100 ನಿಮಿಷಗಳಲ್ಲೇ ಬಗೆಹರಿಸಲಾಗಿದೆ ಎಂದು ಆಯೋಗ ಹೇಳಿದೆ. ಅಕ್ರಮ ಫಲಕಗಳ ಬಗ್ಗೆಯೇ 58,500 ದೂರುಗಳು ಬಂದಿವೆ. ಹಣ, ಕೊಡುಗೆ ಹಾಗೂ ಮದ್ಯ ವಿತರಿಸುತ್ತಿರುವ ಬಗ್ಗೆ 1,400 ದೂರುಗಳು ಬಂದಿವೆ ಎಂದು ಆಯೋಗ ತಿಳಿಸಿದೆ.

## ಕೆಸೆಟ್ : ಪರಿಷ್ಕೃತ ಕೀ ಉತ್ತರ ಪ್ರಕಟ

ಬೆಂಗಳೂರು, ಮಾ. 29 - ಜ.23ರಂದು 42 ನಾನಾ ವಿಷಯಗಳಿಗೆ ನಡೆಸಲಾಗಿದ್ದ ಕೆಸೆಟ್ ಪರೀಕ್ಷೆಯ ಪೈಕಿ ಆಕ್ಷೇಪಣೆಗಳು ಕಂಡುಬಂದಿದ್ದ 23 ವಿಷಯಗಳಲ್ಲಿ ಮನಃಶ್ಶಾಸ್ತ್ರವನ್ನು ಹೊರತುಪಡಿಸಿ, ಮಿಕ್ಕ 22 ವಿಷಯಗಳ ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ ಎಂದು ರಮ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪದವಿ ಕಾಲೇಜು ಉಪನ್ಯಾಸಕರ ನೇಮಕಕ್ಕೆ ಇದು ಅರ್ಹತಾ ಪರೀಕ್ಷೆ ಆಗಿದ್ದು, ಅಭ್ಯರ್ಥಿಗಳ ಆಕ್ಷೇಪಣೆಗಳನ್ನು ಆಧರಿಸಿ, ಪರಿಷ್ಕೃತ ಕೀ ಉತ್ತರಗಳನ್ನು ನೀಡಲಾಗಿದೆ ಎಂದು ಅವರು ವಿವರಿಸಿದ್ದಾರೆ.

## ಪಿಎಸ್ಐ ಮರು ಪರೀಕ್ಷೆ ಅಂತಿಮ ಅಂಕ ಪಟ್ಟಿ

ಬೆಂಗಳೂರು, ಮಾ. 29 - ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ಹುದ್ದೆಗಳ ನೇಮಕಾತಿ ಅಂಗವಾಗಿ ಜ.23ರಂದು ನಡೆಸಿದ್ದ ಮರುಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು ಪತ್ರಿಕೆ-1 ಮತ್ತು 2ರಲ್ಲಿ ಗಳಿಸಿರುವ ಅಂಕಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಟ್ಟು 545 ಹುದ್ದೆಗಳ ನೇಮಕಕ್ಕೆ ಕೆಇಎ ಮರು ಪರೀಕ್ಷೆ ನಡೆಸಿತ್ತು. ಅಭ್ಯರ್ಥಿಗಳು ಪಡೆದ ಅಂಕಗಳ ಮಾಹಿತಿಯನ್ನು ಸದ್ಯದಲ್ಲೇ ಗೃಹ ಇಲಾಖೆಗೆ ಸಲ್ಲಿಸಲಾಗುತ್ತದೆ. ಅದರ ನಂತರ ರೋಸ್ಟರ್ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಅವರು ಪ್ರಕಟಿಸಲಿದ್ದಾರೆ.

## ಮಾಜಿ ಶಾಸಕ ರಾಜು ಪಾಲ್ ಹತ್ಯೆ : ಏಳು ಜನರು ದೋಷಿ

ನವದೆಹಲಿ ಮಾ. 29 – ಬಿ.ಎಸ್.ಪಿ. ಮಾಜಿ ಶಾಸಕ ರಾಜು ಪಾಲ್ ಹತ್ಯೆ ಪ್ರಕರಣದಲ್ಲಿ ಏಳು ಜನರು ದೋಷಿಗಳು ಎಂದು ಲಖ್ನೌದ ಸಿ.ಬಿ.ಐ. ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

ಪ್ರಕರಣದಲ್ಲಿ ಆರೋಪಿಗಳಾಗಿದ್ದ ಆತಿಕ್ ಅಹಮದ್, ಆತನ ಸಹೋದರ ಖಲೀದ್ ಆಜಿಮ್ ಹಾಗೂ ಗುಲ್ಬುಲ್ ಪ್ರಕರಣದ ವಿಚಾರಣೆ ವೇಳೆಯೇ ಕೊನೆಯುಸಿರೆಳೆದಿದ್ದಾರೆ.

ರಾಜು ಪಾಲ್ ಅವರು ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಿಂದ ಬಿ.ಎಸ್.ಪಿ. ಶಾಸಕರಾಗಿದ್ದರು. ಜನವರಿ 25, 2005ರಲ್ಲಿ ಅವರನ್ನು ರಾಜಕೀಯ ಕಾರಣಕ್ಕೆ ಹತ್ಯೆ ಮಾಡಲಾಗಿತ್ತು.

ಪಾಲ್ ಅವರು 2004ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಆತಿಕ್ ಸಹೋದರ ಅಶ್ರಫ್‌ರನ್ನು ಸೋಲಿಸಿದ್ದರು. ಈ ಹತ್ಯೆ ಪ್ರಕರಣದಲ್ಲಿ ರಣಜೀತ್ ಪಾಲ್, ಅಬಿದ್, ಫರ್ಹಾನ್ (4ನೇ ಪುಟಕ್ಕೆ)




**ದಾವಣಗೆರೆ ನಗರದ ಪಿ.ಜೆ ಬಡಾವಣೆಯಲ್ಲಿರುವ ಸಂತ ತೋಮಸರ ದೇವಾಲಯದಲ್ಲಿ ಗುಡ್ ಫ್ರೈಡೇ ಆಚರಿಸಲಾಯಿತು. ಮಧ್ಯಾಹ್ನ ಯೇಸುವಿನ ಯಾತನೆಗಳ ಹಾಗೂ ಮರಣದ ಸಂಕೇತವಾಗಿ ಹೊರಾಂಗಣ ಶಿಲುಬೆಯ ಹಾದಿ, ಶಿಲುಬೆಯ ಸನ್ಮಾನ ಹಾಗೂ ವಿಶೇಷ ಪ್ರಾರ್ಥನೆ ನಡೆಯಿತು.**

## ರಾಹುಲ್ ಪ್ರತಿಸ್ಪರ್ಧಿ ವಿರುದ್ಧ ನೂರಾರು ಪ್ರಕರಣ

**ಶಬರಿಮಲೆ ಪ್ರತಿಭಟನೆಗೆ ಸಂಬಂಧಿಸಿದ 237 ಕೇಸ್**

ಕೊಚ್ಚಿ, ಮಾ. 29 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿರುವ ಬಿಜೆಪಿ ರಾಜ್ಯಾಧ್ಯಕ್ಷ ಕೆ. ಸುರೇಂದ್ರನ್, ಶಬರಿಮಲೆ ಪ್ರತಿಭಟನೆಗೆ ಸಂಬಂಧಿಸಿದಂತೆ 237 ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

2018ರಲ್ಲಿ ಶಬರಿಮಲೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ನಡೆಸಿದ ಕಾರಣಕ್ಕೆ ನೂರಾರು ಪ್ರಕರಣಗಳನ್ನು ಅವರ ವಿರುದ್ಧ ದಾಖಲಿಸಲಾಗಿದೆ.

ಎರ್ನಾಕುಲಂ ಕ್ಷೇತ್ರದ ಅಭ್ಯರ್ಥಿ ಕೆ.ಎಸ್. ರಾಧಾಕೃಷ್ಣನ್ ಅವರೂ, ಶಬರಿಮಲೆ ವಿಷಯಕ್ಕೆ ಸಂಬಂಧಿಸಿದಂತೆ ನೂರಾರು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ.

ನಾಮಪತ್ರ ಸಲ್ಲಿಸುವಾಗ ಪ್ರಕರಣಗಳ ವಿವರ ಸಲ್ಲಿಸುವುದು ಕಡ್ಡಾಯವಾಗಿದೆ. ಆ ಸಂದರ್ಭದಲ್ಲಿ ಸುರೇಂದ್ರನ್ ಹಾಗೂ ರಾಧಾಕೃಷ್ಣನ್ ಪ್ರಕರಣಗಳ ವಿವರಗಳನ್ನು ಬಹಿರಂಗ ಪಡಿಸಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಭಾರತದ ಕೆಲ ಭಾಗ ಗಳಲ್ಲಿ ರಾಷ್ಟ್ರವಾದಿ ಯಾಗಿರುವುದು ಕಠಿಣ. ಆದರೆ, ಈ ಹೋರಾಟ ಅಮೂಲ್ಯವಾಗಿದೆ ಎಂದಿದ್ದಾರೆ.

ಶಬರಿಮಲೆ ದೇವಾಲಯದಲ್ಲಿ ಮಹಿಳೆಯರಿಗೆ (2ನೇ ಪುಟಕ್ಕೆ)

## ಎ.ಐ. ದುರ್ಬಳಕೆ ಅಪಾಯ ತಪ್ಪಿಸಬೇಕಿದೆ : ಪ್ರಧಾನಿ



ನವದೆಹಲಿ, ಮಾ. 29 – ಕೃತಕ ಬುದ್ಧಿವಂತಿಕೆ (ಎ.ಐ.) ರೀತಿಯ ಶಕ್ತಿಶಾಲಿ ತಂತ್ರಜ್ಞಾನ ಕೌಶಲ್ಯರಹಿತ ಹಾಗೂ ತರಬೇತಿ ರಹಿತರ ಕೈಗೆ ಸಿಕ್ಕರೆ ದುರ್ಬಳಕೆಯಾಗುವ ಅಪಾಯ ಹೆಚ್ಚಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಎ.ಐ. ತಂತ್ರಜ್ಞಾನದ ದುರ್ಬಳಕೆ ತಡೆಗಾಗಿ ಹಾಗೂ ಡೀಪ್‌ಫೇಕ್‌ನಿಂದ ಸಮಾಜದಲ್ಲಿ ಆಗುವ ಹಾನಿಗಳ ತಡೆಗಾಗಿ ಸ್ಪಷ್ಟ ಮಾರ್ಗಸೂಚಿಗಳಿರಬೇಕು ಎಂದೂ ಮೋದಿ ಹೇಳಿದ್ದಾರೆ. ಮೈಕ್ರೋಸಾಫ್ಟ್ ಸಹ ಸ್ಥಾಪಕ ಬಿಲ್ ಗೇಟ್ಸ್ ಜೊತೆ ಸಂವಾದ ನಡೆಸಿರುವ ಪ್ರಧಾನಿ ಮೋದಿ, ಎ.ಐ. ತಂತ್ರಜ್ಞಾನ, ನಾಲ್ಕನೇ ಹಂತದ ಕೈಗಾರಿಕಾ ಕ್ರಾಂತಿ ಹಾಗೂ ಡಿಜಿಟಲ್ ಬಳಕೆಯ ಕುರಿತು ಚರ್ಚಿಸಿದ್ದಾರೆ.

ಎ.ಐ. ಮೂಲಕ ಡೀಪ್‌ಫೇಕ್ ಮಾಹಿತಿ ರೂಪುಗೊಳ್ಳುತ್ತಿರುವುದನ್ನು ಗುರುತಿಸಬೇಕಿದೆ. ಇದರ ಜೊತೆಗೆ ಎ.ಐ. ಮೂಲಕ ರೂಪಿಸಲಾದ ಮಾಹಿತಿಗಳನ್ನು ಸ್ಪಷ್ಟವಾಗಿ ತಿಳಿಸುವ ವ್ಯವಸ್ಥೆ ರೂಪುಗೊಳ್ಳಬೇಕಿದೆ ಎಂದೂ ಪ್ರಧಾನಿ ಹೇಳಿದ್ದಾರೆ. ಭಾರತದಲ್ಲಿ ಹೊಸ ಯುಗದ ಆವಿಷ್ಕಾರ ತರುವಲ್ಲಿ ಎ.ಐ. ಮಹತ್ವದ ಪಾತ್ರ ವಹಿಸಲಿದೆ. ಜಿ20 ಶೃಂಗಸಭೆಯಲ್ಲಿ ತಮ್ಮ ಭಾಷಣವನ್ನು ವಿವಿಧ ಭಾಷೆಗಳಿಗೆ ತರ್ಜುಮೆ ಮಾಡಲು ಎ.ಐ. ನೆರವಾಗಿತ್ತು ಎಂದೂ ಮೋದಿ ತಿಳಿಸಿದ್ದಾರೆ.

## ಸಿಇಟಿ ಆನ್‌ಲೈನ್ ಅರ್ಜಿ ಅವಧಿ ವಿಸ್ತರಣೆ

ಬೆಂಗಳೂರು, ಮಾ. 29 - ಏ.18 ಮತ್ತು 19ರಂದು ನಡೆಸಲು ಉದ್ದೇಶಿಸಿರುವ ಸಿಇಟಿ ಪರೀಕ್ಷೆಗೆ ಆನ್ಲೈನ್ ಅರ್ಜಿ ಸಲ್ಲಿಸಲು ಮಾರ್ಚ್ 30ರ ಬೆಳಿಗ್ಗೆ 11 ಗಂಟೆಯಿಂದ ಏ.1ರ ಸಂಜೆ 4 ಗಂಟೆಯವರೆಗೆ ಮತ್ತೊಂದು ಅವಕಾಶ ಕೊಡಲಾಗಿದೆ. ಅರ್ಜಿ ಸಲ್ಲಿಸುವವರು ಏ.1ರ ರಾತ್ರಿ 8 ಗಂಟೆಯವರೆಗೂ ಶುಲ್ಕ ಪಾವತಿಸಬಹುದು. ಈ ಅವಕಾಶವನ್ನು ಬಳಸಿಕೊಳ್ಳುವ ವಿದ್ಯಾರ್ಥಿಗಳಿಗೆ ಬೆಂಗಳೂರಿನ ಕೇಂದ್ರಗಳಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗುವುದು. ಈ ವಿಷಯದಲ್ಲಿ ಯಾವುದೇ ತಕರಾರುಗಳಿಗೆ ಅವಕಾಶವಿರುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

## ಮುಕ್ತ ಮನಸ್ಸಿನಿಂದ ಮತ ಚಲಾಯಿಸಿ: ಡಿಸಿ



ದಾವಣಗೆರೆ, ಮಾ.29- ಲೋಕಸಭಾ ಚುನಾವಣೆ ನಡೆಯುತ್ತಿದ್ದು, ಮೇ 7 ರಂದು ದಾವಣಗೆರೆ ಕ್ಷೇತ್ರಕ್ಕೆ ಮತದಾನ ನಡೆಯಲಿದೆ. ಮತದಾರರು ತಪ್ಪದೇ ಮತಗಟ್ಟೆಗೆ ಬಂದು ಮತ ಚಲಾಯಿಸಿ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್.ಎಂ.ವಿ ಕರೆ ನೀಡಿದರು.

ಅವರು ಶುಕ್ರವಾರ ಜಿಲ್ಲಾಡಳಿತ, ಸ್ವೀಪ್ ಸಮಿತಿಯಿಂದ ಜಿಲ್ಲಾಡಳಿತ ಭವನದ ಮೆಟ್ಟಿಲುಗಳಲ್ಲಿ ಗ್ರಾಮೀಣಾಭಿವೃದ್ದಿ ಹಾಗೂ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳಿಂದ ಮತದಾರರ ಜಾಗೃತಿ ಅಂಗವಾಗಿ ಏರ್ಪಡಿಸಿದ ಕ್ಯಾಂಡಲ್ ಲೈಟ್ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದರು.

ಚುನಾವಣೆಯಲ್ಲಿ ಮತದಾರರು ಯಾವುದೇ ಆಸೆ, ಆಮಿಷಗಳಿಗೆ ಒಳಗಾಗದೇ ನಿರ್ಮಲ ಮನಸ್ಸಿನಿಂದ ಮತ ಚಲಾಯಿಸಬೇಕು. ತಮ್ಮ ಒಂದು ಮತ ದೇಶದ ಸುಭದ್ರತೆಗೆ ದಾರಿ ದೀಪವಾಗಲಿದೆ. (4ನೇ ಪುಟಕ್ಕೆ)

# ಒಗ್ಗಟ್ಟಿನ ಹೋರಾಟ

### ಭಿನ್ನಾಭಿಪ್ರಾಯ ಕೈ ಬಿಡಲು ಬಿಜೆಪಿ-ಜೆಡಿಎಸ್ ಸಮನ್ವಯ ಸಮಿತಿ ಸಭೆಯಲ್ಲಿ ವರಿಷ್ಠರ ಕರೆ

**ನಮ್ಮ ವಿರೋಧಿಗಳು ಬಲಿಷ್ಠರು. ನಾವು ಭೂತಕಾಲದ ಎಲ್ಲವನ್ನೂ ಮರೆಯದೇ ಇದ್ದರೆ 28ಕ್ಕೆ 28 ಕ್ಷೇತ್ರಗಳನ್ನು ಗೆಲ್ಲಲು ಸಾಧ್ಯವಾಗದು ಎಂದು ಪಕ್ಷದ ಕಾರ್ಯಕರ್ತರಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡು ಕಿವಿ ಮಾತು ಹೇಳಿದ್ದಾರೆ.**

ಬೆಂಗಳೂರು, ಮಾ. 29 - ಸಣ್ಣಪುಟ್ಟ ಭಿನ್ನಾಭಿಪ್ರಾಯ ಮರೆತು ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧ ಒಂದಾಗಿ ಹೋರಾಟ ಮಾಡಿ ಎಂದು ಬಿಜೆಪಿ-ಜೆಡಿಎಸ್ ಮುಖಂಡರು ತಮ್ಮ ಪಕ್ಷಗಳ ಕಾರ್ಯಕರ್ತರು ಮತ್ತು ನಾಯಕರಿಗೆ ಇಂದಿಲ್ಲಿ ಕಿವಿಮಾತು ಹೇಳಿದ್ದಾರೆ.

ನಾವು ಒಂದಾಗಿ ಮುಂದೆ ಹೋಗುವುದರಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಹೇಳಲು ಹೆಸರಿಲ್ಲದಂತಾ ಗುತ್ತದೆ. ನಾವೇ ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ ಎಂದಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡ ನಂತರ ಉಭಯ ಪಕ್ಷಗಳ ಮುಖಂಡರು ಒಂದಾಗಿದ್ದರೂ, ಅಲ್ಲಲ್ಲಿಯೇ ಕಾರ್ಯಕರ್ತರ ಅಪಸ್ವರ ಇತ್ತು. ಇದರ ಬೆನ್ನಲ್ಲೇ ಇಂದು ರಾಜ್ಯಾದ್ಯಂತ ಎರಡೂ ಪಕ್ಷಗಳ ಮುಖಂಡರ ಸಮನ್ವಯ ಸಮಿತಿ ಸಭೆಯಲ್ಲಿ ನಾಯಕರುಗಳು ಮೋದಿ ಪ್ರಧಾನಿಯಾಗಲು ನಾವು ಎಲ್ಲಾ ಬಿನ್ನಾಭಿಪ್ರಾಯ ಮರೆತು ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುವ ಪಣತೊಟ್ಟಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಲೋಕಸಭಾ ಚುನಾವಣೆಯ ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್, ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಮಾಜಿ ಸಚಿವ ಜಿ.ಟಿ. ದೇವೇಗೌಡ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಮಾತನಾಡಿದ ದೇವೇಗೌಡರು ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ. ನಮ್ಮೆದುರು ಇರುವ ಕಾಲಾವಧಿ ಅತ್ಯಂತ ಕಡಿಮೆ ಇದೆ. ನಾವು ಹಳೆಯದೆಲ್ಲವನ್ನು ಮರೆತು, ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಯಡಿಯೂರಪ್ಪ ಮಾತನಾಡಿ, ಈ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ, ಅವರ ಸರ್ಕಾರದ ಖಜಾನೆ ಖಾಲಿಯಾಗಿದ್ದು, ಅಭಿವೃದ್ಧಿ ಕಾರ್ಯಗಳು (4ನೇ ಪುಟಕ್ಕೆ)

# ಕಾಂಗ್ರೆಸ್‌ಗೆ 1,800 ಕೋಟಿ ರೂ.ಗಳ ತೆರಿಗೆ ನೋಟಿಸ್

ನವದೆಹಲಿ, ಮಾ. 29 – ಆದಾಯ ತೆರಿಗೆ ಇಲಾಖೆಯಿಂದ 1,823.08 ಕೋಟಿ ರೂ. ತೆರಿಗೆಗೆ ಹೊಸ ನೋಟಿಸ್ ಬಂದಿದೆ. ಬಿಜೆಪಿ ಆದಾಯ ತೆರಿಗೆ ಕಾಯ್ದೆಗಳನ್ನು ಗಂಭೀರವಾಗಿ ಉಲ್ಲಂಘಿಸುತ್ತಿದೆ ಎಂದು ಕಾಂಗ್ರೆಸ್ ಪಕ್ಷ ಆರೋಪಿಸಿದೆ.

ಲೋಕಸಭಾ ಚುನಾವಣೆಗೆ ಮುಂಚೆ ತನ್ನನ್ನು ಹಣಕಾಸಿನಿಂದ ದುರ್ಬಲಗೊಳಿಸಲು ಬಿಜೆಪಿ ತೆರಿಗೆ ಉಗ್ರವಾದದಲ್ಲಿ ತೊಡಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹಾಗೂ ಪಕ್ಷದ ಖಜಾಂಚಿ ಅಜಯ್ ಮಾಕೆನ್, ತೆರಿಗೆ ಕಾಯ್ದೆಗಳ ಉಲ್ಲಂಘನೆ ಬಗ್ಗೆ ಆದಾಯ ತೆರಿಗೆ ಗಂಭೀರವಾಗಿದ್ದರೆ, ಬಿಜೆಪಿ ಇದೇ ರೀತಿಯ ಉಲ್ಲಂಘನೆ ಮಾಡಿರುವುದಕ್ಕಾಗಿ 4,617.58 ಕೋಟಿ ರೂ.ಗಳ ನೋಟಿಸ್ ಕಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ರಾಜಕೀಯ ಪಕ್ಷಗಳು 24ಎ ಫಾರಂ ಅನ್ನು ಭರ್ತಿ ಮಾಡಿ ಸಲ್ಲಿಸಬೇಕು. ಇದರಲ್ಲಿ ದೇಣಿಗೆದಾರರ ಹೆಸರು ಹಾಗೂ ವಿಳಾಸಗಳ ರೀತಿಯ ಮಾಹಿತಿಗಳನ್ನು ಸಲ್ಲಿಸಬೇಕು. ನಾವು, ಬಿಜೆಪಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಎಲ್ಲಾ ಮಾಹಿತಿ ಪರಿಶೀಲಿಸಿದ್ದೇವೆ. ಬಿಜೆಪಿ ಪ್ರತಿ ವರ್ಷ ಈ ವಿಷಯದಲ್ಲಿ ಲೋಪ ಮಾಡಿದೆ ಎಂದೂ ಮಾಕೆನ್ ಆರೋಪಿಸಿದರು. ಚುನಾವಣಾ ಬಾಂಡ್ ಮೂಲಕ ಬಿಜೆಪಿ (2ನೇ ಪುಟಕ್ಕೆ)

### ಸಿ.ಪಿ.ಐ.ಗೆ 11 ಕೋಟಿ ರೂ. ತೆರಿಗೆ ನೋಟಿಸ್

**ನವದೆಹಲಿ ಮಾ. 29 – ಸಿ.ಪಿ.ಐ. ಪಕ್ಷಕ್ಕೆ ಆದಾಯ ತೆರಿಗೆ ಇಲಾಖೆಯು 11 ಕೋಟಿ ರೂ.ಗಳ ತೆರಿಗೆ ಬಾಕಿಗೆ ನೋಟಿಸ್ ಕಳಿಸಿದೆ. ಕೆಲ ವರ್ಷಗಳ ಹಿಂದೆ ಸಲ್ಲಿಸಿದ ಆದಾಯ ತೆರಿಗೆ ಮಾಹಿತಿಯ ವೇಳೆ ಹಳೆಯ ಪ್ಯಾನ್ ಕಾರ್ಡ್ ಬಳಸಿದ್ದಕ್ಕಾಗಿ ಈ ನೋಟಿಸ್ ಕಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ನೋಟಿಸ್ ಎದುರಿಸುವ ಬಗ್ಗೆ ಕಾನೂನು ಸಲಹೆ ಪಡೆಯಲಾಗುತ್ತಿದೆ. ಹಳೆಯ ಪ್ಯಾನ್ ಕಾರ್ಡ್ ಬಳಸಿದ್ದಕ್ಕಾಗಿ ದಂಡ ಹಾಗೂ ಬಡ್ಡಿಯ ರೂಪದಲ್ಲಿ ಹಣ ಕೇಳಿ ನೋಟಿಸ್ ಕಳಿಸಲಾಗಿದೆ ಎಂದು ಸಿ.ಪಿ.ಐ. ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.**

# ನುಡಿದಂತೆ ನಡೆದಿದ್ದಕ್ಕೆ, ಅಭಿವೃದ್ಧಿಗೆ ಮತ ನೀಡಿ

### ಜಗಳೂರಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಮತಯಾಚನೆ

ಜಗಳೂರು, ಮಾ.29- ಹಿಂದಿನ ಡಬಲ್ ಇಂಜಿನ್ ಸರ್ಕಾರ ಮಾಡಿದ ಸಾಧನೆ ಏನು? ಎಂಬುದನ್ನು ವಿಮರ್ಶಿಸಬೇಕಾದ ಮತ್ತು 25 ವರ್ಷಗಳಿಂದ ಕ್ಷೇತ್ರದಲ್ಲಿ ಗೆದ್ದವರು ಏನು ಮಾಡಿದ್ದಾರೆ? ಎಂದು ಜನರು ಯೋಚಿಸಿ ಮತ ನೀಡಬೇಕು ಎಂದು ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಮನವಿ ಮಾಡಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಮುಖಂಡರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಸಂವಿಧಾನ ಅವರ ಕೈಯಲ್ಲಿ ಸುರಕ್ಷಿತವಾಗಿ ಇದೆಯೋ ಇಲ್ಲವೋ? ರೈತರ ಸಮಸ್ಯೆಗೆ ಪರಿಹಾರ ದೊರೆತಿದೆಯೋ ಇಲ್ಲವೋ? ಎಂಬುದನ್ನೂ ಸಹ ಜನ ವಿಮರ್ಶಿಸಿ ಈ ಚುವಾವಣೆಯಲ್ಲಿ ಮತ ನೀಡಬೇಕಾಗಿದೆ ಎಂದು ಅವರು ತಿಳಿಸಿದರು.

ನಾವು ಪಕ್ಷದ ಟಿಕೆಟ್ ಕೇಳಿರಲಿಲ್ಲ. ಕಳೆದ 25 ವರ್ಷಗಳಿಂದ ಪಕ್ಷದ ನಾಯಕರಿಗೆ ಮತಯಾಚನೆ ಮಾಡುತ್ತಾ ಬಂದಿದ್ದೇನೆ. ಕಾರ್ಯಕರ್ತಳಾಗಿ ಕೆಲಸ ಮಾಡಿದ್ದೇನೆ. ಎಸ್.ಎಸ್ ಕೇರ್ ಟ್ರಸ್ಟ್ ಮೂಲಕ ಸಮಾಜಸೇವೆಯಲ್ಲಿ ತೊಡಗಿದ್ದೇನೆ. ಇದನ್ನು ಗುರುತಿಸಿ ಪಕ್ಷ ಟಿಕೆಟ್ ನೀಡಿದೆ. ಇದೊಂದು ಸೇವೆ ಮಾಡುವ ಅವಕಾಶ ದೊರಕಿದೆ ಎಂದರು.

ಚುನಾವಣಾ ಯುದ್ಧ ಆರಂಭವಾಗಿದೆ. ಅಂತಿಮವಾಗಿ ಜಯ ನಮ್ಮದೇ ಆಗಬೇಕು. ಈ ದೆಸೆಯಲ್ಲಿ ಪಕ್ಷದ ಎಲ್ಲಾ ಕಾರ್ಯಕರ್ತರು, ಮುಖಂಡರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷದ ಐದು ಗ್ಯಾರಂಟಿ ಯೋಜನೆಗಳ ಬಗ್ಗೆ ಕಾರ್ಯಕರ್ತರು ಮನೆ ಮನೆಗೆ ಹೋಗಿ ತಿಳಿಸಬೇಕು ಮತ್ತು ತಲುಪದೇ ಇರುವ ಮನೆಗಳಿಗೆ ಸೌಲಭ್ಯ ತಲುಪಿಸುವ (2ನೇ ಪುಟಕ್ಕೆ)



### ನಾನು ಗೆದ್ದರೆ ತ್ರಿಬಲ್ ಇಂಜಿನ್ ಸರ್ಕಾರ

**ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದಿದೆ. ನಾನು ಗೆದ್ದರೆ ತ್ರಿಬಲ್ ಇಂಜಿನ್ ಸರ್ಕಾರ ನಿಮಗೆ ಸಿಗಲಿದೆ. ಸ್ಥಳೀಯವಾಗಿ ದೇವೇಂದ್ರಪ್ಪ ಶಾಸಕರಾಗಿದ್ದಾರೆ. ಜಿಲ್ಲೆಯಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ನಾನು ಗೆದ್ದರೆ ಕೇಂದ್ರದಲ್ಲಿ ನಿಮ್ಮ ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ಪ್ರಭಾ ಅವರು ಅಭಯ ನೀಡಿದರು.**

**ಜಗಳೂರು ಕ್ಷೇತ್ರದಲ್ಲಿ ಅನೇಕ ಕೆಲಸಗಳು ಆಗಬೇಕಿದೆ. ಕೆರೆ ತುಂಬಿಸುವ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ. ಮಹಿಳೆಯರಿಗಾಗಿ ಕೈಗಾರಿಕೆಗಳು ಸ್ಥಾಪನೆ ಆಗಬೇಕಾಗಿದೆ. ಯುವಕರು ಕೆಲಸಕ್ಕಾಗಿ ಸಿಟಿಗಳಿಗೆ ಗುಳೇ ಹೋಗುವುದನ್ನು ತಪ್ಪಿಸಬೇಕಾಗಿದೆ. ನಿಮ್ಮ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡಲು ಹೆಚ್ಚಿನ ಮತದಿಂದ ಗೆಲ್ಲಿಸಿ ಎಂದು ಅವರು ಮನವಿ ಮಾಡಿದರು.**

# ದೇಶ ಮೋದಿ ಕೈಯಲ್ಲಿದ್ದರೆ ನಾವೆಲ್ಲಾ ಸುರಕ್ಷಿತ

### ಎಸ್.ಎ. ರವೀಂದ್ರನಾಥ್ ಸಾರಥ್ಯದಲ್ಲಿ ಗಾಯತ್ರಿ ಸಿದ್ದೇಶ್ವರ ಪರ ಪ್ರಚಾರ

ದಾವಣಗೆರೆ, ಮಾ. 29- ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಪರ ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಭರ್ಜರಿ ಪ್ರಚಾರ ನಡೆಸಿದರು.

ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್, ಮಾಜಿ ಮುಖ್ಯ ಸಚೇತಕ ಶಿವಯೋಗಿ ಸ್ವಾಮಿ ಸೇರಿದಂತೆ ಪ್ರಮುಖ ನಾಯಕರು ಜೊತೆಯಾಗಿ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಹಳ್ಳಿಗಳಲ್ಲಿ ತೆರೆದ ವಾಹನ ಹಾಗೂ ಕಾಲ್ನಡಿಗೆ ಮೂಲಕ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಪರ ಮತಯಾಚನೆ ಮಾಡಿದರು.

ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಮಾತನಾಡಿ, ನಮ್ಮೆಲ್ಲರ ಗುರಿ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡೋದು. ಈ ದೇಶ ಮೋದಿ ಕೈಯ್ಯಲ್ಲಿದ್ದರೆ ನಾವೆಲ್ಲಾ ಸುರಕ್ಷಿತವಾಗಿ ಇರಬಹುದು. ನಾವೆಲ್ಲ ಸೇರಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಅವರನ್ನು ಹೆಚ್ಚಿನ ಬಹುಮತದಿಂದ ಗೆಲ್ಲಿಸುವ ಮೂಲಕ ಕೇಂದ್ರದ ಅಧಿಕಾರ ಮತ್ತೊಮ್ಮೆ ನರೇಂದ್ರ ಮೋದಿ ಅವರ ಕೈಗೆ ಕೊಡಬೇಕು ಎಂದು ಕರೆ ನೀಡಿದರು.

ದಾವಣಗೆರೆ ಜಿಲ್ಲೆ ಸ್ಮಾರ್ಟ್ ಸಿಟಿ ಸೇರಿದಂತೆ ಸಾಕಷ್ಟು ಆಯಾಮದಲ್ಲಿ ಅಭಿವೃದ್ಧಿ ಹೊಂದುವುದಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ್ ಅವರ ಕೊಡುಗೆ ಇದೆ. ಈ ಬಾರಿ ಅವರ ಪತ್ನಿ ಶ್ರೀಮತಿ ಗಾಯಿತ್ರಿ ಸಿದ್ದೇಶ್ವರ್ ಅವರಿಗೆ ಟಿಕೆಟ್ ಸಿಕ್ಕಿದ್ದು, ಅವರನ್ನು ಗೆಲ್ಲಿಸಿ ಕೇಂದ್ರಕ್ಕೆ ಕಳುಹಿಸಿದರೆ ದಾವಣಗೆರೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅವರು ಶ್ರಮಿಸುತ್ತಾರೆ ಎಂದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಪರಾಜಿತ ಅಭ್ಯರ್ಥಿ, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ವಿಧಾನಸಭಾ ಚುನಾವಣೆ ವೇಳೆ ನೀವೆಲ್ಲ ನನ್ನ ಪರ ಮತ ಚಲಾಯಿಸಿ, ನನಗೆ ಶಕ್ತಿ ತುಂಬಿದ್ದೀರಿ. ಕಾಂಗ್ರೆಸ್ ಪಕ್ಷದ ಪುಕ್ಕಟೆ ಭರವಸೆಗಳಿಗೆ ಮರಳಾಗದೆ ದೇಶದ ಹಾಗೂ ದಾವಣಗೆರೆ ಅಭಿವೃದ್ಧಿ ದೃಷ್ಟಿಯಿಂದ ನನ್ನ ತಾಯಿ ಸಮಾನರಾದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ್ ಅವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿ ಗೆಲ್ಲಿಸಿ ದೆಹಲಿಗೆ ಕಳುಹಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಸಚೇತಕ ಶಿವಯೋಗಿಸ್ವಾಮಿ ಮಾತನಾಡಿ, ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುತ್ತಿದೆ. ಅದಕ್ಕೆ ಕಾರಣ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಆಡಳಿತ. ಕಾಂಗ್ರೆಸ್ 65 ವರ್ಷಗಳ ಕಾಲ ಮಾಡದ ಅಭಿವೃದ್ಧಿ ಕೆಲಸಗಳನ್ನು ನರೇಂದ್ರ ಮೋದಿ ಅವರು ಕೇವಲ 10 ವರ್ಷಗಳಲ್ಲಿ ಮಾಡಿ ತೋರಿಸಿದ್ದಾರೆ. ನಮ್ಮ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಅವರನ್ನು ಗೆಲ್ಲಿಸುವ ಮೂಲಕ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಬೇಕು ಎಂದು ಕರೆ ನೀಡಿದರು.

ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಮಾತನಾಡಿ, ಹಿರಿಯರಾದ ಎಸ್.ಎ.ರವೀಂದ್ರನಾಥ್ ಅವರು ನಮಗೆ ಮಾರ್ಗದರ್ಶಕರು, ಅವರ ನೇತೃತ್ವದಲ್ಲಿ ಚುನಾವಣೆ (4ನೇ ಪುಟಕ್ಕೆ)



# ದಿಗಂಬರ ಜೈನ ಸಮಾಜದ ಅಧ್ಯಕ್ಷರಾಗಿ ಸುನಿಲ್‌ಕುಮಾರ್



ದಾವಣಗೆರೆ, ಮಾ. 29- ನಗರದ ಶ್ರೀ ಆದಿನಾಥ ಜಿನಮಂದಿರದಲ್ಲಿ ನಡೆದ ದಿಗಂಬರ ಜೈನ ಸಮಾಜದ ಶ್ರೀ ಮಹಾವೀರ ಸಂಘದ ನೂತನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 25 ವರ್ಷಗಳಿಂದ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಉದ್ಯಮಿ ಸುನಿಲ್‌ಕುಮಾರ್ ಡಿ. ಅವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಕಾರ್ಯದರ್ಶಿಯಾಗಿ ಚಂದ್ರಪ್ರಭು ಬಿ., ಉಪಾಧ್ಯಕ್ಷರುಗಳಾಗಿ ಹಿರಿಯ ಪತ್ರಕರ್ತ ಎಸ್. ಬಿ. ಜಿನದತ್ ಮತ್ತು ನೇಮಿರಾಜ್ ಡಿ. (ಅಕ್ಕಿ), ಸಹ-ಕಾರ್ಯದರ್ಶಿಯಾಗಿ ಪ್ರೀತಂ ಧುಂಡಸಿ, ಖಜಾಂಚಿಯಾಗಿ ಧನ್ಯಕುಮಾರ್ ಬಿಳಿಚೋಡು, ಸಹ ಖಜಾಂಚಿಯಾಗಿ ಅಶೋಕ್ ಡಿ. ಬೇತೂರು ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸುದರ್ಶನ್‌ಕುಮಾರ್ ಎಂ.ಎ., ಆದಿನಾಥ್ ಎಸ್., ಅಜಿತ್ ಕುಮಾರ್ ಬಿ.ಎಸ್., ಟಾಕಪ್ಪ ಎಸ್.ಕೆ., ಪಾರ್ಶ್ವನಾಥ್ ಎಸ್.ಜಿ., ಪ್ರಶಾಂತ್‌ಕುಮಾರ್ ಎಂ.ಪಿ., ಧರಣೇಂದ್ರ ಪ್ರಸಾದ್ ಮತ್ತು ಮಂಜುನಾಥ್ ಮುತ್ತಿಗಿ ಇವರುಗಳು ಆಯ್ಕೆಯಾಗಿರುತ್ತಾರೆ.

ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷರಾದ ಅಜಿತ್‌ಕುಮಾರ್ ಬೇತೂರು ನೂತನ ಅಧ್ಯಕ್ಷ ಸುನಿಲ್‌ಕುಮಾರ್ ಡಿ. ಅವರಿಗೆ ಜೈನ ಧರ್ಮಧ್ವಜವನ್ನು ನೀಡುವುದರ ಮೂಲಕ ಅಧಿಕಾರ ಹಸ್ತಾಂತರಿಸಿ, ಶುಭ ಕೋರಿದರು.

# ತೋಟಗಳಿಗೆ ನೀರು ತಲುಪಿಸದಿದ್ದರೆ ಎಂಪಿ ಚುನಾವಣೆ ಬಹಿಷ್ಕಾರ : ರೈತರ ಎಚ್ಚರಿಕೆ

**ಮಲೇಬೆನ್ನೂರಿಗೆ ಡಿಸಿ, ಎಸ್ಪಿ ಭೇಟಿ ನೀಡುವಂತೆ ಆಗ್ರಹ**

ಮಲೇಬೆನ್ನೂರು, ಮಾ.29- ಭದ್ರಾ ಅಚ್ಚು ಕಟ್ಟಿನ ಕೊನೆ ಭಾಗದ ತೋಟಗಳಿಗೆ ನೀರು ತಲು ಪಿಸದಿದ್ದರೆ ಲೋಕಸಭಾ ಚುನಾವಣೆಯನ್ನು ಬಹಿ ಷ್ಕರಿಸುವುದಾಗಿ ಕುಂಬಳೂರು, ಜಿಗಳಿ, ವಿನಾಯಕ ನಗರ ಕ್ಯಾಂಪ್ ಮತ್ತು ನಿಟ್ಟೂರು ಗ್ರಾಮಗಳ ರೈತರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಭದ್ರಾ ನಾಲಾ ನಂ -3 ಉಪವಿಭಾಗ ವ್ಯಾಪ್ತಿಯ 9ಬಿ ಉಪಕಾಲುವೆಗೆ ಮತ್ತು 11ಎ ಉಪಕಾಲುವೆಗೆ ಇದುವರೆಗೂ ಕನಿಷ್ಠ ನೀರು ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ರೈತರು ಶುಕ್ರವಾರ ಮಲೇಬೆನ್ನೂರಿನ ನೀರಾವರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಅಧಿಕಾರಿಗಳು ಚುನಾವಣೆ ನೆಪ ಹೇಳಿಕೊಂಡು ಭದ್ರಾ ನಾಲೆಯ ನೀರನ್ನು ರೈತರಿಗೆ ತಲುಪಿಸುವ ಪ್ರಯತ್ನ ಮಾಡುತ್ತಿಲ್ಲ. ನೀರಿನ ವಿಚಾರವಾಗಿ ಮಲೇಬೆನ್ನೂರು ಭಾಗಕ್ಕೆ ಇದುವರೆಗೂ ಡಿಸಿ, ಎಸ್ಪಿ ಭೇಟಿ ನೀಡಿಲ್ಲ. ಅವರು ದಾವಣಗೆರೆ ಸುತ್ತಮುತ್ತ ಭೇಟಿ ನೀಡಿ, ಅಲ್ಲಿಯೇ ಇದ್ದಾರೆ ಎಂದು ರೈತರು ದೂರಿದರು.

ಇಂಜಿನಿಯರ್‌ಗಳು ಹಾಗೂ ನೀರಗಂಟಿಗಳು ಪೊಲೀಸ್ ಭದ್ರತೆಯಲ್ಲಿ ನೀರಿನ ನಿರ್ವಹಣೆ ಮಾಡಬೇಕೆಂದು ರೈತರು ಹೇಳಿದರು.

ನಾಲೆಯಲ್ಲಿ ನೀರು ಬಂದ್ ಆಗುವ ಮೊದಲು ತೋಟಗಳಿಗೆ ನೀರು ತಲುಪಿಸಲು ಡಿಸಿ, ಎಸ್ಪಿ ಕ್ರಮ ವಹಿಸಬೇಕು. ಇಲ್ಲದಿದ್ದರೆ ಲೋಕಸಭಾ ಚುನಾವಣೆ ಯನ್ನು ಬಹಿಷ್ಕರಿಸುವುದು ನಿಶ್ಚಿತ ಎಂದು ಹೇಳಿದ ರೈತರು, ನಂತರ ದಾವಣಗೆರೆ ಡಿಸಿ ಕಚೇರಿಗೆ ತೆರಳಿ ಮನವಿ ಪತ್ರವನ್ನೂ ನೀಡಿ ಬಂದಿದ್ದಾರೆ.

ಜಿಗಳಿಯ ಬಿಳಸನೂರು ಚಂದ್ರಪ್ಪ, ಕುಂಬ ಳೂರಿನ ಕೆ.ತೀರ್ಥಪ್ಪ, ಜಿ.ಶಂಕರಗೌಡ, ಕೆ.ಲಿಂಗ ರಾಜ್, ಎ.ಎನ್.ಆಂಜನೇಯ, ಎ.ಹನುಮೇಶ್, ಎಂ.ಕೆ.ಸ್ವಾಮಿ, ಮಾಗಾನಹಳ್ಳಿ ರಮೇಶ್, ಎಸ್. ರಾಜು, ಎ.ಶಂಭಪ್ಪ, ದೇವರಾಜ್, ಬಿ.ಎಸ್. ಸಾಗರ್, ಶಿವು, ಕೆ.ಆಂಜನೇಯ, ಎ.ಬಿ.ಶಂಭು ಲಿಂಗ, ನಿಟ್ಟೂರು ಶಿವಕುಮಾರ್, ವಿನಾಯಕ ನಗರ ಕ್ಯಾಂಪಿನ ಸಿ.ಹೆಚ್.ಪ್ರಸಾದ್, ಎಂ.ಧರ್ಮ ರಾಜ್, ನಾಗೇಶ್ವರಾವ್, ಹರಿಶೇಷಾದ್ರಿ, ನಾನಿ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿದ್ದರು.



# ಹೊನ್ನಾಳಿ : ನಾಳೆ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಎಸ್ಸೆಸ್ಸೆಂ ಚುನಾವಣಾ ಪ್ರಚಾರ



ಹೊನ್ನಾಳಿ, ಮಾ. 29 - ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣಾ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಚುನಾವಣಾ ಪ್ರಚಾರ ಸಭೆಯನ್ನು ನಾಡಿದ್ದು ದಿನಾಂಕ 31ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಿ. ಜಿ. ಶಾಂತನಗೌಡ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ಪಕ್ಷವು ಜಿಲ್ಲಾದ್ಯಂತ ಸರ್ವೇ ನಡೆಸಿ ಅದರ ಆಧಾರದ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರ ಪತ್ನಿ ಪ್ರಭಾ ಅವರು ಹಲವಾರು ವರ್ಷಗಳಿಂದ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕಾರಣ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನಾಗಿಸಲಾಗಿದೆ. ಈಗಾಗಲೇ ದಾವಣಗೆರೆ ನಗರದಲ್ಲಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಹಾಲಿ-ಮಾಜಿ ಶಾಸಕರುಗಳ, ವಿವಿಧ ಘಟಕಗಳ ಅಧ್ಯಕ್ಷರುಗಳ, ಕಾಂಗ್ರೆಸ್ ಮುಖಂಡರುಗಳ-ಕಾರ್ಯಕರ್ತರುಗಳ ಸಭೆ ಕರೆದು ಚುನಾವಣಾ ಕಾರ್ಯ ತಂತ್ರದ ಬಗ್ಗೆ ಸಮಾಲೋಚನೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಮಾತನಾಡಿ, ಸರ್ವೇ ಆಧಾರದ ಮೇಲೆ ಚುನಾವಣೆಯಲ್ಲಿ ಗೆಲ್ಲುವ ಅಭ್ಯರ್ಥಿಗೆ ಪಕ್ಷವು ಮಣೆ ಹಾಕಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡಿದ್ದು, ಪಕ್ಷವು ಟಿಕೆಟ್ ನೀಡಿದ ವ್ಯಕ್ತಿಗೆ ಬೆಂಬಲಕ್ಕೆ ನಿಲ್ಲಬೇಕೇ ವಿನಃ ಅವರಿಗೆ ಮುಜುಗರವುಂಟಾಗದಂತೆ ಜಿ.ಬಿ. ವಿನಯ್‌ಕುಮಾರ್ ಸೇರಿದಂತೆ ಯಾರೂ ನಡೆದುಕೊಳ್ಳಬಾರದೆಂದು ಅವರು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಸದಸ್ಯ ಡಾ. ಈಶ್ವರ್ ನಾಯ್ಕ್, ಹೊನ್ನಾಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್. ಬಿ. ಶಿವಯೋಗಿ, ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್. ನಾಗಪ್ಪ, ಎನ್.ಎಸ್.ಯು.ಐ. ತಾಲ್ಲೂಕು ಅಧ್ಯಕ್ಷ ಮನೋಜ್ ವಾಲಜ್ಜಿ, ಬಗರ್ ಹುಕ್ಕುಂ ಸಮಿತಿ ಸದಸ್ಯ ಸಣ್ಣಕ್ಕಿ ಬಸವನಗೌಡ, ಮುಖಂಡರುಗಳಾದ ಎಚ್.ಎ. ಉಮಾಪತಿ, ಬಿ. ಸಿದ್ದಪ್ಪ, ವಾಗೀಶ್ ನುಚ್ಚಿನ್, ಎಂ. ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

# ರಾಹುಲ್ ಪ್ರತಿಸ್ಪರ್ಧಿ ವಿರುದ್ಧ ನೂರಾರು ಪ್ರಕರಣ

**(1ನೇ ಪುಟದಿಂದ)** ಪ್ರವೇಶ ಇರಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಆ ಆದೇಶ ಜಾರಿಗೆ ತರಲು ಕೇರಳ ಸರ್ಕಾರ ಮುಂದಾಗಿದ್ದರ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಿತ್ತು.

# ತಂಗಡಗಿ ಹೇಳಿಕೆ ಸತ್ಯ, ಅವರ ಬೆನ್ನಿಗೆ ಸಮಾಜವಿದೆ



ಹರಪನಹಳ್ಳಿ, ಮಾ.29- ಸಚಿವ ಶಿವರಾಜ್ ತಂಗಡಗಿ ಅವರು ಪ್ರಧಾನಿ ಮೋದಿಯವರ ಬಗ್ಗೆ ನೀಡಿದ್ದ ಹೇಳಿಕೆ ಸತ್ಯವಾಗಿದ್ದು, ಅದನ್ನು ಹಿಂಪಡೆಯುವ ಪ್ರಮೇಯವೇ ಇಲ್ಲ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸಮರ್ಥನೆ ಮಾಡಿಕೊಂಡಿದ್ದಾರೆ.

ಪಟ್ಟಣದ ಸಮತಾ ರೆಸಾರ್ಟ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರಟಗಿಯಲ್ಲಿ ನಡೆದ ಕಾರ್ಯ ಕ್ರಮದಲ್ಲಿ ಸಚಿವ ಶಿವರಾಜ್ ತಂಗಡಗಿ ಅವರು ಪ್ರಧಾನಿಯವರು ನೀಡಿದ್ದ ನಿರುದ್ಯೋಗ ನಿರ್ಮೂಲನಾ ಭರವಸೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆ. ಆದರೂ ಯುವಕರು ಅವರನ್ನೇ ಜಪ ಮಾಡುತ್ತಿದ್ದಾರೆ. ಅಂಥವರಿಗೆ ಕಪಾಳಕ್ಕೆ ಹೊಡೆಯಬೇಕು ಎಂದು ಸಂಬೋಧಿಸಿರುವುದು ನಿಜವಾಗಿದೆ ಎಂದರು.

ಇನ್ನೂ ನಿರುದ್ಯೋಗ ಸಮಸ್ಯೆ ಉಲ್ಬಣವಾಗಿದೆಯೇ ಹೊರತು ಪರಿಹಾರ ಸಿಕ್ಕಿಲ್ಲ. ಆದ್ದರಿಂದ ಅವರ ಮಾತು ಅಕ್ಷರಷಃ ಸತ್ಯವಾಗಿದೆ. ತಂಗಡಿಗಿಯವರ ಬೆನ್ನಿಗೆ ರಾಜ್ಯದ ಎಲ್ಲ ಭೋವಿ ಸಮುದಾಯವಷ್ಟೇ ಅಲ್ಲ, ಕಾಂಗ್ರೆಸ್ ಪಕ್ಷವೂ ಇದೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ. ಅಂಜಿನಪ್ಪ ಮಾತನಾಡಿ, ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪಟ್ಟಣಕ್ಕೆ ನಾಳೆ ದಿನಾಂಕ 30ರ ಶನಿವಾರ ಭೇಟಿ ನೀಡಲಿದ್ದು, ಹೊಸಪೇಟೆ ರಸ್ತೆಯ ತರಳಬಾಳು ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 11 ಗಂಟೆಗೆ ಮತಯಾಚನೆ ಪ್ರಚಾರ ಕೈಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಸುರೇಶ್, ಪುರಸಭೆ ಸದಸ್ಯರುಗಳಾದ ಗೊಂಗಡಿ ನಾಗ ರಾಜ್, ಡಿ. ರೆಹಮಾನ್, ವಕೀಲ ವೆಂಕಟೇಶ್, ಪೈಲ್ವಾನ್ ಗಣೇಶ್, ಎಲ್.ಎಂ.ನಾಯ್ಕ್ ಮತ್ತು ಇತರರಿದ್ದರು.

# ಯತೀಂದ್ರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು: ಅಶೋಕ್

ಬೆಂಗಳೂರು, ಮಾ. 29 - ಯತೀಂದ್ರ ಸಿದ್ದರಾಮಯ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಬಗ್ಗೆ ನೀಡಿದ ಹೇಳಿಕೆ ವಿರುದ್ಧ ಬಿಜೆಪಿ ವತಿಯಿಂದ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು. ಯತೀಂದ್ರ ಹೀಗೆಯೇ ಮಾತನಾಡುತ್ತಿದ್ದರೆ ರಾಹುಲ್ ಗಾಂಧಿಯಂತೆ ಜೈಲಿಗೆ ಹೋಗುವ ಸ್ಥಿತಿ ಬರಲಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಎನ್ನುವ ಕಾರಣಕ್ಕೆ ಹಾಗೂ ರಾಷ್ಟ್ರ ನಾಯಕರ ಬಗ್ಗೆ ಮಾತನಾಡಿದರೆ ದೊಡ್ಡ ವ್ಯಕ್ತಿಯಾಗುತ್ತೇನೆ, ಇದರಿಂದ ಬೆಲೆ ಬರುತ್ತದೆ ಎನ್ನುವ ಕಾರಣಕ್ಕೆ ಯತೀಂದ್ರ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಕುರಿತು ಟೀಕೆ ಮಾಡಿದ್ದಾರೆ. ಹತಾಶ ಮನೋಭಾವ, ಬುದ್ಧಿಭ್ರಮಣೆ ಹಾಗೂ ಅಪ್ರಬುದ್ಧತೆಯಿಂದ ಅವರು ಮಾತನಾಡಿದ್ದಾರೆ. ಅವರ ಪ್ರಜ್ಞೆಯ ಮಟ್ಟ ಬಹಳ ಕಡಿಮೆ ಇದೆ ಎಂದರು.

ಮೈಸೂರಿನ ರಾಜಕಾರಣದ ಬಗ್ಗೆ ಮಾತನಾಡಲು ಯತೀಂದ್ರ ಅವರಿಗೆ ಯೋಗ್ಯತೆ ಇಲ್ಲ. ಅಲ್ಲಿನ ರಾಜಕಾರಣ ಬಿಟ್ಟು ಕೇಂದ್ರದ ರಾಜಕಾರಣದ ಬಗ್ಗೆ ಅವರು ಮಾತನಾಡಿದ್ದಾರೆ. ಇಂತಹ ಬಾಲಿಶ ಹಾಗೂ ಕೊಬ್ಬಿನ ಹೇಳಿಕೆ ನೀಡುವುದು ಕಾಂಗ್ರೆಸ್ಸಿನ ಡಿಎನ್‌ಎ ನಲ್ಲೇ ಇದೆ.

ಈಗಾಗಲೇ ರಾಹುಲ್ ಗಾಂಧಿ ಬಾಲಿಶ ಹೇಳಿಕೆ ನೀಡಿ ಜೈಲಿಗೆ ಹೋಗುವ ಸ್ಥಿತಿ ಬಂದಿದೆ. ಯತೀಂದ್ರ ಅವರೂ ಹೀಗೆ ಮಾತನಾಡುತ್ತಿದ್ದರೆ, ಕೊನೆಗೆ ಜೈಲೇ ಗತಿಯಾಗಲಿದೆ. ಅವರು ಎಚ್ಚರದಿಂದ ಮಾತನಾಡಲಿ ಎಂದರು.

# ಖೋಖೋ ಬೇಸಿಗೆ ತರಬೇತಿ

ದಾವಣಗೆರೆ, ಮಾ.29- ಯುವ ಸಬಲೀಕರಣ, ಕ್ರೀಡಾ ಇಲಾಖೆ, ಜಿಲ್ಲಾ ಖೋಖೋ ಸಂಸ್ಥೆ ಹಾಗೂ ನೋಂದಾಯಿತ ಖೋ-ಖೋ ಕ್ರೀಡಾ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 1ರಿಂದ 20ರ ವರೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರತಿದಿನ ಬೆಳಗ್ಗೆ 6.30ರಿಂದ 8ರ ವರೆಗೆ ಮತ್ತು ಸಂಜೆ 5ರಿಂದ 6.30ರ ವರೆಗೆ ಉಚಿತ ಖೋಖೋ ಬೇಸಿಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ.

ವಿವರಕ್ಕೆ ತರಬೇತಿ ಮೇಲ್ವಿಚಾರಕರಾದ ಎಚ್.ಎಂ. ರಘು (8792460980), ಮರುಳಸಿದ್ದಪ್ಪ (8105262830), ನಾಗರಾಜ್ ಉತ್ತಂಗಿ (9632158115), ಎ.ಬಿ. ಸಿದ್ದೇಶ್ (9743927252) ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ಖೋಖೋ ಸಂಸ್ಥೆಯ ಅಧ್ಯಕ್ಷ ಜಿ. ಎಸ್.ಡಿ. ಮೂರ್ತಿ ಮತ್ತು ಕಾರ್ಯದರ್ಶಿ ಜೆ.ರಾಮಲಿಂಗಪ್ಪ ತಿಳಿಸಿದ್ದಾರೆ.

# ಮೂಳೆ ವೈದ್ಯ ಮಹಾದೇವಯ್ಯನವರಿಂದ ಚಿಕಿತ್ಸೆ



ದಾವಣಗೆರೆ, ಮಾ. 29- ನಗರದ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿರುವ ವೈದ್ಯರಾದ ಶ್ರೀಮತಿ ಪುಷ್ಪಲತ ಅವರ ಮನೆಯಲ್ಲಿ ರಾಮನಗರ ಜಿಲ್ಲೆಯ ಕುದೂರಿನ ಮೂಳೆಯ ವೈದ್ಯ ಮಹದೇವಯ್ಯ ಅವರು ಮೂಳೆ ಮುರಿತ, ಲಿಗ್‌ಮೆಂಟ್ ಸಮಸ್ಯೆ, ಮೊಣಕಾಲು ನೋವು, ಭುಜದ ನೋವು ಮುಂತಾದ ಸಮಸ್ಯೆ ಇರುವವರಿಗೆ ಜಿಲ್ಲಾ ಪಾರಂಪರಿಕ ವೈದ್ಯ ಪರಿಷತ್ ಅಡಿಯಲ್ಲಿ ಚಿಕಿತ್ಸೆ ನೀಡಿದರು.

ಈ ಕಾರ್ಯಕ್ರಮದ ಮೇಲ್ವಿಚಾರಣೆಯನ್ನು ಪಾರಂಪರಿಕ ವೈದ್ಯರಾದ ಶ್ರೀಮತಿ ಕೆ.ಎಂ. ಪುಷ್ಪಲತ ಹಾಗೂ ಉಮೇಶ್ ವಹಿಸಿಕೊಂಡಿದ್ದರು. ಸಂಪರ್ಕಿಸಿ : 97438 95325, 98801 07918.

# ಹನಗವಾಡಿಯಲ್ಲಿಂದು ರಥೋತ್ಸವ



ಹರಿಹರ ತಾಲ್ಲೂಕು ಹನಗವಾಡಿ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇಂದು ಸಂಜೆ 5 ಗಂಟೆಗೆ ಜರುಗಲಿದೆ. ನಾಳೆ ಭಾನುವಾರ ಬೆಳಿಗ್ಗೆ 6.30 ರಿಂದ 12.30 ರವರೆಗೆ ಶ್ರೀ ಸ್ವಾಮಿಯ ಗುಗ್ಗಳ ಕಾರ್ಯಕ್ರಮವು ವೀರಗಾಸೆ ತಂಡದವರಿಂದ ಪುರವಂತರು, ಸಮಾಳದವರು ಹಾಗೂ ವಿವಿಧ ಮೇಳಗಳೊಂದಿಗೆ ನಡೆಯಲಿದೆ.

# ಏಪ್ರಿಲ್‌ನಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಪ್ರವಾಸ



ಬಾಳೆಹೊನ್ನೂರು, ಮಾ. 29- ಏಪ್ರಿಲ್ 1 ರಿಂದ 29 ರವರೆಗೆ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುವ ಧಾರ್ಮಿಕ ಸಮಾರಂಭಗಳಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು ಭಾಗವಹಿಸಲಿದ್ದಾರೆ.

ದಿನಾಂಕ 1 ರಂದು ಬೈಲಹೊಂಗಲ ತಾಲ್ಲೂಕು ವಣ್ಣೂರು ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ದಲ್ಲಿ, ದಿನಾಂಕ 2 ರಂದು ತೀರ್ಥಹಳ್ಳಿ ತಾಲ್ಲೂಕು ಕವಲೇದುರ್ಗ ಮಠದಲ್ಲಿ ಇಷ್ಟಲಿಂಗ ಮಹಾಪೂಜಾ ಕಾರ್ಯಕ್ರಮ, ದಿನಾಂಕ 3 ರಂದು ರಾಣೇಬೆನ್ನೂರು ತಾಲ್ಲೂಕು ಲಿಂಗದಹಳ್ಳಿಯಲ್ಲಿ ಇಷ್ಟಲಿಂಗ ಮಹಾಪೂಜೆ, ದಿನಾಂಕ 4 ರಂದು ಅಜ್ಜಂಪುರ ತಾಲ್ಲೂಕು ಗೌರಾಪುರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಸಮಾರಂಭ, 5 ರಂದು ಹೊನ್ನಾಳಿ ತಾಲ್ಲೂಕು ಕುಳಗಟ್ಟೆಯಲ್ಲಿ ಇಷ್ಟಲಿಂಗ ಮಹಾಪೂಜೆ, 6 ರಂದು ಕಡೂರು ತಾಲ್ಲೂಕು ಹೊಗರೆಖಾನ್ ಶ್ರೀ ಸಿದ್ದೇಶ್ವರ ಕ್ಷೇತ್ರದಲ್ಲಿ ಮಂಡಲ ಪೂಜೆ, 7 ರಂದು ಚಿಕ್ಕಮಗಳೂರು ತಾಲ್ಲೂಕು ಮುತ್ತಿನಪುರದಲ್ಲಿ ಶ್ರೀ ವೀರಭದ್ರೇಶ್ವರ ಕ್ಷೇತ್ರದಲ್ಲಿ ಮಂಡಲ ಪೂಜೆ.

8 ರಂದು ಹುಬ್ಬಳ್ಳಿ ತಾಲ್ಲೂಕು ತಿರುಮಲಕೊಪ್ಪದಲ್ಲಿ ಧರ್ಮ ಜಾಗೃತಿ ಸಮಾರಂಭ, 9 ರಂದು ತಿರುಮಲಕೊಪ್ಪ ದಲ್ಲಿ ಶ್ರೀ ಯುಗಮನೋತ್ಸವ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯರ ರಥೋತ್ಸವ ಕಾರ್ಯಕ್ರಮ, 10 ರಂದು ಹುಬ್ಬಳ್ಳಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಸಮಾರಂಭ, 11 ಹಾಗೂ 12 ರಂದು ಧಾರವಾಡ ತಾಲ್ಲೂಕು ಅಮ್ಮಿನಭಾವಿಯಲ್ಲಿ ಧರ್ಮ ಸಮಾರಂಭ ನೂತನ ರಥೋತ್ಸವಕ್ಕೆ ಚಾಲನೆ.

13 ರಂದು ಹುಬ್ಬಳ್ಳಿ ತಾಲ್ಲೂಕು ಹಳಿಯಾಳದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ರಥೋತ್ಸವ ಹಾಗೂ ಧರ್ಮ ಸಮಾರಂಭ, 14 ರಂದು ಹಾವೇರಿ ತಾಲ್ಲೂಕು ನೆಗಳೂರು ಗ್ರಾಮದಲ್ಲಿ ಕಳಸಾರೋಹಣ ಮತ್ತು ಸಾಮೂಹಿಕ ವಿವಾಹ ಸಮಾರಂಭ, 15 ರಂದು ಕಲಘಟಗಿ ತಾಲ್ಲೂಕು ಸಂಗೇದೇವರಕೊಪ್ಪದಲ್ಲಿ ನೂತನ ದೇವಾಲಯ ಉದ್ಘಾಟನಾ ಸಮಾರಂಭ, 16 ರಂದು ಕಲಘಟಗಿ ತಾಲ್ಲೂಕು ಬೇಗೂರು ಗ್ರಾಮದಲ್ಲಿ ಗ್ರಾಮ ದೇವತೆ ಪ್ರತಿಷ್ಠಾಪನಾ ಸಮಾರಂಭ.

17 ರಂದು ಚಡಚಣ ತಾಲ್ಲೂಕು ಏಳಗಿ ಪಿ.ಎಸ್ ನಲ್ಲಿ ಶ್ರೀ ವೀರಭದ್ರಸ್ವಾಮಿ ಮಹಾದ್ವಾರ ಉದ್ಘಾಟನಾ ಸಮಾರಂಭ, 18 ರಂದು ಅಫಜಲಪುರ ತಾಲ್ಲೂಕು ಕರಟಗಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಕಳಸಾರೋಹಣ, 19 ರಂದು ಚಿತ್ತಾಪುರ ತಾಲ್ಲೂಕು ಶ್ರೀ ಸಿದ್ದೇಶ್ವರ ಜ್ಞಾನಧಾಮದಲ್ಲಿ ಧರ್ಮ ಸಮಾರಂಭ, 23 ರಂದು ಬಾಳೇಹೊನ್ನೂರು ಕ್ಷೇತ್ರದಲ್ಲಿ ಪೌರ್ಣಿಮೆ, 29 ರಂದು ಕುಂದಗೋಳ ತಾಲ್ಲೂಕು ಪಶುಪತಿಹಾಳ ಗ್ರಾಮದಲ್ಲಿ ಧರ್ಮ ಜಾಗೃತಿ ಸಮಾರಂಭದಲ್ಲಿ ಜಗದ್ಗುರುಗಳು ಪಾಲ್ಗೊಳ್ಳಲಿದ್ದಾರೆ.

# ಹಾಲಿವಾಣದಲ್ಲಿ ಇಂದು ಶಾಂತಿಸಭೆ

ಮಲೇಬೆನ್ನೂರು ಸಮೀಪದ ಹಾಲಿವಾಣ ಗ್ರಾಮದಲ್ಲಿ ಏ.1 ರಿಂದ 5 ರವರೆಗೆ ಗ್ರಾಮದೇವತೆ ಶ್ರೀ ಏಳೂರು ಕರಿಯಮ್ಮದೇವಿ ಜಾತ್ರೆ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತದಿಂದ ಇಂದು ಮಧ್ಯಾಹ್ನ 12 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಶಾಂತಿ ಸಭೆ ಏರ್ಪಡಿಸಲಾಗಿದೆ ಎಂದು ತಹಶೀಲ್ದಾರ್ ಗುರುಬಸವರಾಜ್ ತಿಳಿಸಿದ್ದಾರೆ.

**ಕುನಗಲಿ ಗ್ರಾಮದ ತ್ಯಾಗರಾಜು ಕೆ.ಜೆ. ನಿಧನ**



ದಾವಣಗೆರೆ ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್, 2ನೇ ಕ್ರಾಸ್ ವಾಸಿ ದಿ. ಜನಾರ್ದನ್ ಕೆ.ಜೆ. ಇವರ ಪುತ್ರ ತ್ಯಾಗರಾಜು ಕೆ.ಜೆ. (59) ಇವರು ದಿನಾಂಕ 29.03.2024ರ ಶುಕ್ರವಾರ ರಾತ್ರಿ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.03.2024ರ ಶನಿವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗ್ರಾಮವಾದ ಹೊಳಲ್ಕೆರೆ ತಾಲ್ಲೂಕು ಕುನಗಲಿ ಗ್ರಾಮದಲ್ಲಿ ನೆರವೇರಲಿದೆ.

# ನುಡಿದಂತೆ ನಡೆದದ್ದಕ್ಕೆ, ಅಭಿವೃದ್ಧಿಗೆ ಮತ ನೀಡಿ

**(1ನೇ ಪುಟದಿಂದ)** ಕೆಲಸವನ್ನು ಮಾಡಬೇಕು ಎಂದರು.

ಶಾಸಕ ಬಿ. ದೇವೇಂದ್ರಪ್ಪ ಅವರು ಮಾತನಾಡಿ, ಕಾಂಗ್ರೆಸ್ ಪಕ್ಷದ ಅಭಿವೃದ್ಧಿ ಮತ್ತು ಗ್ಯಾರಂಟಿ ಯೋಜನೆಗಳ ಬಗ್ಗೆ ಕಾರ್ಯಕರ್ತರು ಮನೆ ಮನೆಗೆ ತೆರಳಿ ತಿಳಿಸುವ ಮೂಲಕ ಮತ ಯಾಚನೆ ಮಾಡಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದಲ್ಲಿದೆ ನಮ್ಮ ಪಕ್ಷದವರು ಸಂಸದರಾದರೆ ಅಭಿವೃದ್ಧಿ ಕಾರ್ಯಗಳು ಚುರುಕುಗೊಳ್ಳಲಿವೆ. ಆದ್ದರಿಂದ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸಲು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಶ್ರಮಿಸಬೇಕು ಎಂದು ಕರೆ ನೀಡಿದರು.

ಸಭೆಗೆ ಮೊದಲು ಶ್ರೀ ಕ್ಷೇತ್ರ ಗಾಣಗಟ್ಟೆ ಮಾಯಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ವಿಧಾನಸಭಾ ಕ್ಷೇತ್ರದ ಚಿಕ್ಕ ಉಜ್ಜನಿ ಗ್ರಾಮದಲ್ಲಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮತಯಾಚನೆ ಮಾಡಿದರು.

ಪಟ್ಟಣದ ಗಾಂಧಿ ವೃತ್ತದಿಂದ ತರಳಬಾಳು ಕೇಂದ್ರದ ವರೆಗೆ ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಲಾಯಿತು. ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಪ್ರಧಾನ ಕಾರ್ಯದರ್ಶಿ, ಎಂ.ಡಿ. ಕೀರ್ತಿ ಕುಮಾರ್ ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಶೀರ್ ಅಹ್ಮದ್, ಅರಸಿಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜಣ್ಣ , ಕೆಪಿಸಿಸಿ ಸದಸ್ಯ ಕಲ್ಲೇಶ್ವರ ರಾಜ್ ಪಟೇಲ್, ಕಾಂಗ್ರೆಸ್ ಮುಖಂಡರಾದ ಶಿವನಗೌಡ, ಶ್ರೀಮತಿ ನಾಗರತ್ನಮ್ಮ, ತಿಪ್ಪೇಸ್ವಾಮಿ ಗೌಡ, ಅರಸಿಕೆರೆ ಕೊಟ್ರೇಶ್, ಪಲ್ಲಾಗಟ್ಟೆ ಶೇಖರಪ್ಪ ಮುಂತಾದವರು ಇದ್ದರು.

# ಸಿಜಿ ಆಸ್ಪತ್ರೆಯಲ್ಲಿ ಮಹಿಳಾ ದಿನಾಚರಣೆ




ದಾವಣಗೆರೆ, ಮಾ.29- ನಗರದ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.


ಈ ಸಂದರ್ಭದಲ್ಲಿ ಜಿಲ್ಲಾ 108 ಅಂಬ್ಯುಲೆನ್ಸ್‌ನ ಇಎಂಆರ್ ಐ ಗ್ರೀನ್ ಹೆಲ್ತ್ ಸರ್ವೀಸ್ ಸಂಸ್ಥೆಯ ಜಿಲ್ಲಾ ವ್ಯವಸ್ಥಾಪಕ ವಿನಯ್ ಕುಮಾರ್ ಹಾಗೂ ಅಭಿಲಾಷ್ ಪಾಟೀಲ್ ಅವರು ಸಿಬ್ಬಂದಿಯೊಂದಿಗೆ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಮಹಿಳಾ ವೈದ್ಯರು, ಶುಶ್ರೂ ಷಕರು ಹಾಗೂ ಮಹಿಳಾ ಸಿಬ್ಬಂದಿಗಳಿಗೆ ಶುಭಾಶಯಗಳನ್ನು ತಿಳಿಸಿದರು.

# ಕಾಂಗ್ರೆಸ್‌ಗೆ ತೆರಿಗೆ ನೋಟಿಸ್

**(1ನೇ ಪುಟದಿಂದ)** ಲಂಚವಾಗಿ 8,200 ಕೋಟಿ ರೂ.ಗಳನ್ನು ಪಡೆದಿದೆ. ಮತ್ತೊಂದೆಡೆ ಬಿಜೆಪಿ ತೆರಿಗೆ ಉಗ್ರವಾದದಲ್ಲಿ ತೊಡಗಿದೆ ಎಂದೂ ಅವರು ಆರೋಪಿಸಿದರು.

ಇಷ್ಟಾದರೂ ಕಾಂಗ್ರೆಸ್ ಚುನಾವಣಾ ಪ್ರಚಾರದಲ್ಲಿ ಮುಂದುವರೆಯಲಿದೆ. ತನ್ನ ಗ್ಯಾರಂಟಿಗಳನ್ನು ದೇಶದ ಜನರಿಗೆ ತಲುಪಿಸಲಿದೆ. ನಾವು ಈ ನೋಟಿಸ್‌ಗಳಿಗೆ ಹೆದರುವುದಿಲ್ಲ. ಇನ್ನಷ್ಟು ತೀವ್ರವಾಗಿ ಚುನಾವಣಾ ಹೋರಾಟ ನಡೆಸುತ್ತೇವೆ ಎಂದು ರಮೇಶ್ ಹೇಳಿದ್ದಾರೆ.

ಸಮಾನ ಮನಸ್ಕ ವಿರೋಧ ಪಕ್ಷಗಳನ್ನು ಗುರಿಯಾಗಿಟ್ಟುಕೊಂಡು ಆದಾಯ ತೆರಿಗೆ ಇಲಾಖೆ ಕಾರ್ಯನಿರ್ವಹಿಸುತ್ತಿದೆ. ಇಲಾಖೆಯು ಬಿಜೆಪಿಯ ಮುಂಚೂಣಿ ಸಂಘಟನೆಯಾಗಿದೆ ಎಂದೂ ಅವರು ಆರೋಪಿಸಿದರು. ಎಂಟು ವರ್ಷಗಳ ಹಿಂದೆ ಕಾಂಗ್ರೆಸ್ ಸಲ್ಲಿಸಿದ್ದ ಆದಾಯ ತೆರಿಗೆ ಮಾಹಿತಿಯನ್ನು ಆಧಾರ ರಹಿತವಾಗಿ ಮರು ಪರಿಶೀಲಿಸಲಾಗುತ್ತಿದೆ. ಈಗ ಸಾವಿರಾರು ಕೋಟಿ ರೂ.ಗಳ ತೆರಿಗೆ ಕೇಳಲಾಗುತ್ತಿದೆ. ಲೋಕಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಇಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದು ಇಲಾಖೆಯ ದುರುದ್ದೇಶ ತೋರಿಸುತ್ತಿದೆ ಎಂದು ಮಾಕೆನ್ ಹೇಳಿದರು



**15ನೇ ವರ್ಷದ ಪುಣ್ಯಸ್ಮರಣೆ**

**ಶ್ರೀ ಟಿ.ಆರ್. ಶೇಖರಪ್ಪ**

(ಮರಣ : 30.03.2009)

ಜಮೀನ್ದಾರರು, ತಿಮ್ಮೇನಹಳ್ಳಿ.

ಆಡಳಿತಾಧಿಕಾರಿಗಳು, ಶ್ರೀ ವಾಲ್ಮೀಕಿ ಗುರುಪೀಠ, ರಾಜನಹಳ್ಳಿ.

*ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳಾದವು, ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ ....*

ಶ್ರೀಮತಿ ಟಿ.ಆರ್. ನಿರ್ಮಲ ಮತ್ತು ಮಕ್ಕಳು

ಶ್ರೀಮತಿ ಟಿ.ಎಸ್. ಶೈಲ ಶ್ರೀ ಡಾ|| ಮಾರುತೇಶ್ ಎ.ಎಂ., ಚಿ|| ಎ.ಎಂ. ಚಿರಾಗ್, ಚಿ|| ಎ.ಎಂ. ಚಿನ್ಮಯಿ

ಶ್ರೀಮತಿ ಟಿ.ಎಸ್. ರಾಧ ಶ್ರೀ ಮಹೇಶ್ ಜಿ.ಎಂ., ಚಿ|| ಜಿ.ಎಂ. ಪ್ರಥಮ್, ಚಿ|| ಜಿ.ಎಂ. ಪ್ರೀತಮ್,

ಚಿ|| ಟಿ.ಎಸ್. ಅನಿಲ್‌ಕುಮಾರ್, ಶ್ರೀಮತಿ ಶ್ರೀ ಅಂಗಡಿ ಮಲ್ಲಪ್ಪ ಮತ್ತು ಮಕ್ಕಳು, ಕೈದಾಳೆ.

ಶ್ರೀಮತಿ ಶ್ರೀ ಜಿ.ಓ. ಮಹಾಂತಪ್ಪ ಮತ್ತು ಮಕ್ಕಳು, ಹಾಸನ.

ಶ್ರೀ ಕೆ.ಹೆಚ್. ಕಾಂತರಾಜು ಮತ್ತು ಸಹೋದರರು, ದಾಗಿನಕಟ್ಟೆ ಹಾಗೂ ಬಂಧು-ಮಿತ್ರರು.

# ರಾಣೇಬೆನ್ನೂರು : ಬಿಜೆಪಿಯತ್ತ ವಾಲಿದ ಆರ್. ಶಂಕರ್ ಜನ



ರಾಣೇಬೆನ್ನೂರು, ಮಾ. 29 - ಮಾಜಿ ಸಚಿವ ಆರ್. ಶಂಕರ್ ಅಭಿಮಾನಿಗಳು, ಅವರ ಎನ್‌ಸಿಪಿ ಪಕ್ಷದ ಕಾರ್ಯಕರ್ತರು ಇಂದು ಸಾಮೂಹಿಕವಾಗಿ ಬಿಜೆಪಿ ಸೇರುವ ಸಭೆ ಪಕ್ಷದ ಕಾರ್ಯಾಲಯದಲ್ಲಿ ಲೋಕಸಭೆ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸಂಜೆ ನಡೆಯಿತು.

ನಗರಸಭೆ ಸದಸ್ಯರಾದ ನಿಂಗರಾಜ ಕೋಡಿಹಳ್ಳಿ, ರಮೇಶ ಮೆಡ್ಲೇರಿ ಮುಂತಾದವರ ಹಿರಿತನದಲ್ಲಿ ಮೆಡ್ಲೇರಿ, ಹೀಲದಹಳ್ಳಿ, ಚಂದಾಪೂರ, ಬೇಲೂರು ಗ್ರಾಮಗಳ ಗ್ರಾ.ಪಂ. ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು, ಸಾರ್ವಜನಿಕರು, ರಾಣೇಬೆನ್ನೂರು ನಗರದ ಅನೇಕ ಅಭಿಮಾನಿಗಳು ಸೇರಿದಂತೆ ಶಂಕರ್ ವರ್ತನೆಯಿಂದ ಅವರನ್ನು ತೊರೆದು ಬಿಜೆಪಿ ಸೇರಿದ್ದಾರೆ ಎಂದು ಕೋಡಿಹಳ್ಳಿ ವಿವರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅರುಣ ಪೂಜಾರ ಪರಿಶ್ರಮದ ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಭೈರತಿ ಬಸವರಾಜ್, ಬಿ.ಸಿ.ಪಾಟೀಲ, ಎಸ್.ಎಸ್. ರಾಮಲಿಂಗಣ್ಣನವರ, ಕೆ. ಶಿವಲಿಂಗಪ್ಪ, ಎ.ಬಿ. ಪಾಟೀಲ, ಭಾರತಿ ಜಂಬಗಿ, ಭಾರತಿ ಅಳವಂಡಿ, ಪರಮೇಶ ಗೂಳಣ್ಣನವರ, ರಮೇಶ ಗುತ್ತಲ, ಪ್ರಮೋದ ಬದಾಮಿ ಮತ್ತಿತರರಿದ್ದರು.

## ಸಂಕ್ಷಿಪ್ತ ಸುದ್ದಿ

**ಜೆಡಿಎಸ್ ಅಭ್ಯರ್ಥಿಗಳ ಹೆಸರು ಪ್ರಕಟ**
ಬೆಂಗಳೂರು: ಲೋಕಸಭಾ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಗಳ ಅಧಿಕೃತ ಪಟ್ಟಿ ಬಿಡುಗಡೆ ಆಗಿದೆ. ಹಾಸನದಿಂದ ಹೆಚ್.ಡಿ. ಕುಮಾರಸ್ವಾಮಿ, ಕೋಲಾರದಿಂದ ಮಲ್ಲೇಶ್ ಬಾಬು ಹಾಗೂ ಹಾಸನದಿಂದ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಅವರ ಹೆಸರನ್ನು ಅಂತಿಮಗೊಳಿಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ.

**ಕಾಂಗ್ರೆಸ್ ಮೂವರು ಅಭ್ಯರ್ಥಿಗಳ ಘೋಷಣೆ**
ಬೆಂಗಳೂರು : ರಾಜ್ಯದ ಮೂರು ಲೋಕಸಭಾ ಕ್ಷೇತ್ರಗಳಿಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಬಳ್ಳಾರಿ ಕ್ಷೇತ್ರದಿಂದ ಇ. ತುಕಾರಾಂ, ಚಾಮರಾಜನಗರದಿಂದ ಸುನಿಲ್ ಬೋಸ್ ಹಾಗೂ ಚಿಕ್ಕಬಳ್ಳಾಪುರದಿಂದ ರಕ್ಷ ರಾಮಯ್ಯ ಸ್ಪರ್ಧಿಸಲಿದ್ದಾರೆ. ಕೋಲಾರ ಕ್ಷೇತ್ರದ ಅಭ್ಯರ್ಥಿಯ ಹೆಸರು ಇನ್ನೂ ಪ್ರಕಟಿಸಿಲ್ಲ.

**ಭಾರತ – ಉಕ್ರೇನ್ ವಿದೇಶಾಂಗ ಸಚಿವರ ಮಾತುಕತೆ**
ನವದೆಹಲಿ : ಭಾರತ ಹಾಗೂ ಉಕ್ರೇನ್‌ಗಳ ವಿದೇಶಾಂಗ ಸಚಿವರು ಹಲವಾರು ದ್ವಿಪಕ್ಷೀಯ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಭಾರತದ ವಿದೇಶಾಂಗ ಸಚಿವ ಜೈಶಂಕರ್ ಹಾಗೂ ಉಕ್ರೇನ್ ವಿದೇಶಾಂಗ ಸಚಿವ ಡಮಿಟ್ರೊ ಕುಲೆಬಾ ಅವರು ಹಾಲಿ ನಡೆಯುತ್ತಿರುವ ಸಂಘರ್ಷ ಹಾಗೂ ಅದರಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆಯೂ ಚರ್ಚಿಸಿದ್ದಾರೆ.

**ಕಾನೂನು ಕ್ರಮ ತೆಗೆದುಕೊಂಡಾಗ ಕೆಲವರು ಬೀದಿಗೆ : ಧನಕರ್**
ನವದೆಹಲಿ : ಕಾನೂನು ತನ್ನ ಕ್ರಮ ತೆಗೆದುಕೊಂಡಾಗ ಕೆಲವರು ಬೀದಿಗಿಳಿದು ಪ್ರತಿಭಟಿಸುತ್ತಾರೆ. ತಾವು ವ್ಯವಸ್ಥೆಗೆ ಅತೀತರಾದವರು ಎಂದುಕೊಂಡಿದ್ದವರು, ಈಗ ಉತ್ತರ ನೀಡುವ ಪರಿಸ್ಥಿತಿ ಬಂದಿದೆ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ. ಪರೋಕ್ಷವಾಗಿ ಅವರು ವಿಪಕ್ಷಗಳನ್ನು ಟೀಕಿಸಿದ್ದಾರೆ.

**ಮಹಾರಾಷ್ಟ್ರದಲ್ಲಿ 'ಸ್ನೇಹ ಸಮರ'ಕ್ಕೆ ಕಾಂಗ್ರೆಸ್ ಪ್ರಸ್ತಾಪ**
ಮುಂಬೈ : ಮಹಾರಾಷ್ಟ್ರದ ಆರು ಲೋಕಸಭಾ ಕ್ಷೇತ್ರಗಳಲ್ಲಿ 'ಸ್ನೇಹ ಸಮರ' ನಡೆಯಲಿ ಎಂದು ಕಾಂಗ್ರೆಸ್ ನಾಯಕ ನಸೀಮ್ ಖಾನ್ ಪ್ರತಿಪಾದಿಸಿದ್ದಾರೆ. ಶಿವಸೇನೆ (ಯು.ಬಿ.ಟಿ.) ಸೀಟು ಹಂಚಿಕೆ ಮೊದಲೇ ಅಭ್ಯರ್ಥಿಗಳನ್ನು ಪ್ರಕಟಿಸಿತ್ತು. ಇದು ಮಹಾ ಅಗಾಡಿ ಮೈತ್ರಿಕೂಟದಲ್ಲಿ ಬಿಕ್ಕಟ್ಟಿಗೆ ಕಾರಣವಾಗಿದೆ. ಆದರೆ, ಈ ರೀತಿಯ ಸಮರದಿಂದ ಬಿಜೆಪಿಗೆ ನೆರವಾಗಲಿದೆ ಎಂದು ಶಿವಸೇನೆ (ಯು.ಬಿ.ಟಿ.) ನಾಯಕ ಸಂಜಯ್ ರಾವತ್ ಹೇಳಿದ್ದಾರೆ.

**ಸ್ಫೋಟ ಪ್ರಕರಣ : ತೃಣಮೂಲ ಮುಖಂಡರಿಗೆ ಸಮನ್ಸ್**
ಕೊಲ್ಕೊತಾ : 2022ರ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್‌ನ ಎಂಟು ಮುಖಂಡರಿಗೆ ಎನ್.ಐ.ಎ. ಸಮನ್ಸ್ ಕಳಿಸಿದೆ. ಪಶ್ಚಿಮ ಬಂಗಾಳದ ಪುರ್ಬಾ ಮೇದಿನಿಪುರದಲ್ಲಿ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ ಈ ಸಮನ್ಸ್ ಕಳಿಸಲಾಗಿದೆ.

**ಯತೀಂದ್ರ ವಿರುದ್ಧ ಬಿಜೆಪಿ ದೂರು**
ಬೆಂಗಳೂರು : ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಸಿದ್ದರಾಮಯ್ಯ ಆಕ್ಷೇಪಾರ್ಹ ಪದಗಳನ್ನು ಬಳಸಿದ್ದಾರೆ ಎಂದು ಚುನಾವಣಾ ಆಯೋಗದ ಬಳಿ ಬಿಜೆಪಿ ದೂರು ನೀಡಿದೆ.

**ನೇಪಾಳಕ್ಕೆ ವಿದ್ಯುತ್ ರಫ್ತಿನ ಒಪ್ಪಂದ ನವೀಕರಣ**
ಕಠ್ಮಂಡು : ನೇಪಾಳಕ್ಕೆ ವಿದ್ಯುತ್ ಪೂರೈಸುವ ಒಪ್ಪಂದವನ್ನು ಮುಂದಿನ ಮೂರು ತಿಂಗಳಿಗಾಗಿ ನವೀಕರಿಸಲಾಗಿದೆ. ನೇಪಾಳದಲ್ಲಿ ತೀವ್ರ ವಿದ್ಯುತ್ ಸಮಸ್ಯೆಯಾಗಿರುವ ನಡುವೆ ಒಪ್ಪಂದ ನವೀಕರಿಸಲಾಗಿದೆ.

**ಪಾಕ್‌ನಲ್ಲಿನ ಅಣೆಕಟ್ಟೆ ನಿರ್ಮಾಣ ತಡೆದ ಚೀನಾ ಗುತ್ತಿಗೆದಾರರು**
ನವದೆಹಲಿ : ಪಾಕಿಸ್ತಾನದ ದಸು ಹಾಗೂ ಡಯಾಮರ್ ಬಾಷಾ ಅಣೆಕಟ್ಟೆ ನಿರ್ಮಾಣ ಯೋಜನೆಯನ್ನು ಚೀನಾದ ಗುತ್ತಿಗೆದಾರರು ಸ್ಥಗಿತಗೊಳಿಸಿದ್ದಾರೆ. ಚೀನಾದ ಇಂಜಿನಿಯರ್‌ಗಳಿದ್ದ ವಾಹನದ ಮೇಲೆ ಆತ್ಮಹತ್ಯಾ ಬಾಂಬ್ ದಾಳಿ ನಡೆದು, ಆರು ಜನ ಸಾವನ್ನಪ್ಪಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

## ಶ್ರೀ ಕೃಷ್ಣ ಯಾದವಾನಂದ ಮಹಾಸ್ವಾಮಿಗಳ ಆಶೀರ್ವಾದ ಪಡೆದ ಡಾ. ಪ್ರಭಾ ಎಸ್ಸೆಸ್ಸೆಂ



ದಾವಣಗೆರೆ, ಮಾ. 29 - ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಜಗದ್ಗುರು ಶ್ರೀ ಕೃಷ್ಣ ಯಾದವಾನಂದ ಮಹಾಸ್ವಾಮಿಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

## ಜಗಳೂರು : ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾರಿಗೆ ಲಕ್ಷ ರೂ.ಗಳ ದೇಣಿಗೆ



ಜಗಳೂರು, ಮಾ.29- ಪಟ್ಟಣದಲ್ಲಿ ಇಂದು ಪ್ರಾರಂಭವಾದ ಲೋಕಸಭಾ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶ್ರೀಮತಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮೆದಗಿನಕೆರೆ ಗೌಡ್ರು ವೀರೇಂದ್ರ ಪಾಟೀಲ್ ಹಾಗೂ ಪುತ್ರ ಅರ್ಜುನ್ ಗೌಡ ಅವರು ನಾಡದೇವತೆ ಚಾಮುಂಡೇಶ್ವರಿ ದೇವಿಯ ಆಶೀರ್ವಾದವಿರುವ ಬೆಳ್ಳಿ ನಾಣ್ಯ ಮತ್ತು 1 ಲಕ್ಷ ರೂಪಾಯಿಗಳನ್ನು ಚುನಾವಣೆ ವೆಚ್ಚಕ್ಕೆ ನೀಡುವ ಮೂಲಕ ವಿಜಯಶಾಲಿಗಳಾಗಿ ಎಂದು ಶುಭ ಕೋರಿದರು.

## ನಗರದಲ್ಲಿ ಇಂದು ವಿಶ್ವ ರಂಗಭೂಮಿ ದಿನಾಚರಣೆ

ಅನ್ವೇಷಕರು ಆರ್ಟ್ ಫೌಂಡೇಶನ್ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇವರ ಸಹಯೋಗದಲ್ಲಿ ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ 5ಕ್ಕೆ 2024ರ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ ಎಂದು ಕಾರ್ಯಕ್ರಮದ ಸಂಚಾಲಕರಾದ ಎಸ್.ಎಸ್. ಸಿದ್ದರಾಜು ತಿಳಿಸಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ. ವಾಮದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಹಿರಿಯ ರಂಗ ಸಂಘಟಕರಾದ ಪ್ರೊ. ಎಸ್. ಹಾಲಪ್ಪ ಅಧ್ಯಕ್ಷತೆ ವಹಿಸುವರು. ನಿವೃತ್ತ ಆಂಗ್ಲ ಭಾಷಾ ಪ್ರಾಧ್ಯಾಪಕರಾದ ಡಾ. ಅನುರಾಧ ಬಕ್ಕಪ್ಪ ವಿಶ್ವ ರಂಗಭೂಮಿ ಸಂದೇಶ ಓದುವರು.

ಜಯಲಕ್ಷ್ಮಿ ಹೆಗಡೆ, ಬೆಂಗಳೂರಿನ ದಾಕ್ಷಾಯಿಣಿ, ಬೀಳಗಿಯ ಸಿದ್ದಪ್ಪ ಸಾಬಣ್ಣ ಬಿದರಿ, ಹೊಸಪೇಟೆಯ ಪಿಂಜಾರ್ ಅಬ್ದುಲ್ ಸಾಬ್, ಚಾಮರಾಜನಗರದ ಸಿ.ಎಂ. ನರಸಿಂಹಮೂರ್ತಿ, ತೀರ್ಥಹಳ್ಳಿಯ ಶ್ರೀಕಾಂತ್ ಕುಮಟಾ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ಏಳು ಊರಿನ ಜನರು ಸೇರಿ ಆಚರಿಸುವ ಅಮ್ಮನ ಹಬ್ಬಕ್ಕೆ ಸಿದ್ಧತೆ





**ಹಾಲಿವಾಣದಲ್ಲಿ ಏಪ್ರಿಲ್ 1 ರಿಂದ 5ರವರೆಗೆ ಏಳೂರು ಕರಿಯಮ್ಮ ದೇವಿ ಜಾತ್ರೆ**

ಮಲೇಬೆನ್ನೂರು, ಮಾ. 29- ಹಾಲಿವಾಣ ಗ್ರಾಮದ ಗ್ರಾಮದೇವತೆ ಶ್ರೀ ಏಳೂರು ಕರಿಯಮ್ಮ ದೇವಿಯ ಜಾತ್ರಾ ಮಹೋತ್ಸವವು ಏಪ್ರಿಲ್ 1 ರಿಂದ 5ರವರೆಗೆ ವಿಜೃಂಭಣೆಯಿಂದ ಜರುಗಲಿದೆ ಎಂದು ಜಾತ್ರಾ ಸಮಿತಿ ಅಧ್ಯಕ್ಷರೂ ಆದ ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ತಿಳಿಸಿದರು.

ಶುಕ್ರವಾರ ಪಟ್ಟಣದಲ್ಲಿ ಕರೆದಿದ್ದ ಸುದ್ದಿ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 14 ವರ್ಷಗಳ ನಂತರ ಅಂದರೆ 15ನೇ ವರ್ಷದಲ್ಲಿ ಗ್ರಾಮ ದೇವತೆ ಹಬ್ಬವನ್ನು ಏಳು ಹಳ್ಳಿಗಳ ಜನರು ಸೇರಿ ಆಚರಿಸುತ್ತಿದ್ದೇವೆ.

ಹಾಲಿವಾಣ, ಕೊಪ್ಪ, ದಿಬ್ಬದಹಳ್ಳಿ, ಯರೇಹಳ್ಳಿ, ಚಿಕ್ಕ ಹಾಲಿವಾಣ, ತಿಮ್ಲಾಪುರ ಮತ್ತು ಚಿಕ್ಕ ತಮ್ಮನಹಳ್ಳಿ, ಬೆಚರ್ ಗ್ರಾಮಗಳಿಗೆ ಒಳಪಟ್ಟಿರುವ ಗ್ರಾಮ ದೇವತೆ ಶ್ರೀ ಏಳೂರು ಕರಿಯಮ್ಮ ದೇವಿಗೆ ಏಪ್ರಿಲ್ 1ರ ಸೋಮವಾರ ಬೆಳಿಗ್ಗೆ 9.05ಕ್ಕೆ ಕಂಕಣಧಾರಣೆಯೊಂದಿಗೆ ಜಾತ್ರೆಗೆ ಚಾಲನೆ ನೀಡಲಾಗುವುದು. ಅಂದು ಬೆಳಿಗ್ಗೆ 9.30ಕ್ಕೆ ಶ್ರೀ ಕರಿಯಮ್ಮ ದೇವಿಗೆ ಅಭಿಷೇಕ ಮತ್ತು ಪುಷ್ಪಾಲಂಕಾರದ ನಂತರ ಮಹಾಪ್ರಸಾದ ವಿನಿಯೋಗ ಇರುತ್ತದೆ.

ಬೆಂಗಳೂರಿನಲ್ಲಿ ನೆಲೆಸಿರುವ ಹಾಲಿ ವಾಣದ ಶ್ರೀಮತಿ ಭಾರತಮ್ಮ ಹೆಚ್.ಪಿ. ಬಸವ ರಾಜಪ್ಪ ಅವರು ಸುಮಾರು 1 ಲಕ್ಷ ರೂ. ವೆಚ್ಚದಲ್ಲಿ ಅಮ್ಮನವರ ದೇವಸ್ಥಾನಕ್ಕೆ ಪುಷ್ಪಾಲಂಕಾರ ಮಾಡಿಸಲಿದ್ದಾರೆ. ಸಂಜೆ 6.30 ರಿಂದ 8 ಗಂಟೆಯವರೆಗೆ ಶ್ರೀ ದೇವಿಯ ಸ್ಮೃತಿ ಮತ್ತು ಮಾರುತಿ ಭಜನಾ ಸಂಘದಿಂದ ಭಜನೆ, ರಾತ್ರಿ 8.30 ರಿಂದ ಹೊನ್ನಾಳಿಯ ಶ್ರೀ ಸಂತೃಪ್ತಿ ಅಂಧರ ಶಾಲೆ ಮಕ್ಕಳಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಏಪ್ರಿಲ್ 2ರ ಮಂಗಳವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ಗ್ರಾಮದ ದೇವರುಗಳಾದ ಶ್ರೀ ಕರಿಯಮ್ಮ, ಶ್ರೀ ಬೀರಲಿಂಗೇಶ್ವರ, ಶ್ರೀ ಹಾಲಸ್ವಾಮಿ, ಶ್ರೀ ಯಲ್ಲಮ್ಮದೇವಿ, ಶ್ರೀ ಗಲ್ಲೆಕಟ್ಟೆ ದುರ್ಗಮ್ಮದೇವಿ, ಶ್ರೀ ಪರಶುರಾಮ ಸೇರಿದಂತೆ ಗೂಡುಕಟ್ಟಿಗೆ ಸೇರಿದ ಎಲ್ಲಾ ಏಳು ಗ್ರಾಮಗಳ ದೇವರುಗಳ ಮೆರವಣಿಗೆಯು ಗ್ರಾಮದ ರಾಜಬೀದಿಗಳಲ್ಲಿ ಡೊಳ್ಳಿನ ತಂಡಗಳ ಕುಣಿತದೊಂದಿಗೆ ಆಗಮಿಸಿ, ಕರಿಯಮ್ಮ ದೇವಸ್ಥಾನ ತಲುಪುವುದು.

ಮುಖಂಡ ನಂದಿಗಾವಿ ಶ್ರೀನಿವಾಸ್ ಮತ್ತು ಮಹಾರುದ್ರ ರೈಸ್‌ಮಿಲ್, ಜಯಪ್ರಕಾಶ ರೈಸ್‌ಮಿಲ್, ಚನ್ನೇಶ್ವರ ರೈಸ್‌ಮಿಲ್ ಹಾಗೂ ವೀರಭದ್ರೇಶ್ವರ ರೈಸ್‌ಮಿಲ್ ಮಾಲೀಕರು ಕಲಾ ತಂಡಗಳ ಪ್ರಾಯೋಜಕರಾಗಿದ್ದಾರೆ.

ಸಂಜೆ 6 ಗಂಟೆಯಿಂದ ಗ್ರಾಮದೇವತೆ ಶ್ರೀ ಏಳೂರು ಕರಿಯಮ್ಮ ದೇವಿಯ ಉತ್ಸವ ಮೂರ್ತಿಯನ್ನು ಐರಣಿ ಮಠದ ಆನೆಯ ಅಂಬಾರಿಯ ಮೇಲೆ ಇಟ್ಟು ಉಡುಪಿಯ ರುದ್ರತಾಂಡವ ಚಂಡೆವಾದ್ಯ ಹಾಗೂ ಸಿಡಿಮದ್ದು ಸಿಡಿತದೊಂದಿಗೆ ಗ್ರಾಮದ ರಾಜಬೀದಿಗಳಲ್ಲಿ ಬುಧವಾರ ಬೆಳಗಿನ ಜಾವದವರೆಗೂ ವಿಜೃಂಭಣೆಯಿಂದ ಮೆರವಣಿಗೆ ಮಾಡಲಾಗುವುದು.

ಏ. 3ರ ಬುಧವಾರ ಬೆಳಗಿನ ಜಾವ 4.30ಕ್ಕೆ ಏಳೂರು ಘಟೆ ಬಂದ ನಂತರ ದೇವಸ್ಥಾನದ ಬಳಿ ಓಕುಳಿ ತುಂಬಿದ ಹಿಟ್ಟಿನ ಕೋಣಗಳ ಬಲಿ ನೀಡಲಾಗುವುದು. ಬೆಳಿಗ್ಗೆ 6 ಗಂಟೆಗೆ ಚರಗ ಹಾಕಲಾಗುವುದು. 8 ಗಂಟೆಯಿಂದ ಹರಕೆ ಹೊತ್ತ ಭಕ್ತರಿಂದ ಉರುಳು ಸೇವೆ, ಬೇವಿ ಉಡುಗೆ, ಬಾಯಿಬೀಗ ಸೇರಿದಂತೆ ವಿವಿಧ ಸೇವೆಗಳು ನಡೆಯಲಿವೆ.

ಏ. 4ರ ಗುರುವಾರ ಬೆಳಿಗ್ಗೆ 8 ಗಂಟೆಗೆ ದೇವಿಗೆ ವಿಶೇಷ ಪೂಜೆ ಮತ್ತು ಸಂಜೆ 4 ರಿಂದ ಸಿಡಿ ಉತ್ಸವ, ರಾತ್ರಿ 8 ಗಂಟೆಗೆ ಭದ್ರಾವತಿಯ ಚಂದನ ಮ್ಯೂಸಿಕಲ್ ನೈಟ್ಸ್ ಆರ್ಕೆಸ್ಟ್ರಾ ವತಿಯಿಂದ ಮತ್ತು ಹಾಲಿವಾಣ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಂದ ರಸಮಂಜರಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಏ. 5ರ ಶುಕ್ರವಾರ ಬೆಳಿಗ್ಗೆ ದೇವಿಗೆ ವಿಶೇಷ ಪೂಜೆ, ಸಂಜೆ 4 ರಿಂದ ಬೆಲ್ಲದ ಬಂಡಿ ಉತ್ಸವ ಮತ್ತು ಓಕುಳಿ, ಸಂಜೆ 6 ಗಂಟೆಗೆ ಮಹಾಮಂಗಳಾರತಿ ಹಾಗೂ ಕಂಕಣ ವಿಸರ್ಜನೆಯೊಂದಿಗೆ ಜಾತ್ರೆಗೆ ತೆರೆ ಎಳೆಯಲಾಗುವುದು ಎಂದು ಎಸ್.ಜಿ. ಪರಮೇಶ್ವರಪ್ಪ ಮಾಹಿತಿ ನೀಡಿದರು.

ಗ್ರಾಮದ ಮುಖಂಡರಾದ ಕೆ.ಪಿ. ಕುಮಾರಸ್ವಾಮಿ, ಕೆ.ಎಂ. ಸಿದ್ದಯ್ಯ, ಡಿ.ಡಿ. ಚಿಕ್ಕಪ್ಪ, ಕೆ. ರೇವಣಸಿದ್ದಪ್ಪ, ಹಾಲಪ್ಪರ ಕರಿಬಸಪ್ಪ, ಕೊಕ್ಕನೂರು ಅಂಜಿನಪ್ಪ, ಜಿ.ಆರ್. ಬಸವನಗೌಡ, ಜಾತ್ರಾ ಸಮಿತಿ ಖಜಾಂಚಿ ಜಿ.ಹೆಚ್. ಬಸವರಾಜ್, ಕೋರಿ ನಾಗರಾಜ್, ಟಿ. ಲೋಕೇಶ್, ಎ.ಡಿ. ಹನುಮಂತಪ್ಪ, ಸಿದ್ದಪ್ಪ, ವಿಜಯಕುಮಾರ್, ಬಿ. ಮಂಜಪ್ಪ, ಎ.ಡಿ. ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಸುದ್ದಿಗೋಷ್ಠಿಯಲ್ಲಿದ್ದರು.

## ಕೆಫೆ ಸ್ಫೋಟದ ಆರೋಪಿಗಳ ಮಾಹಿತಿಗೆ ಬಹುಮಾನ ಘೋಷಣೆ

ನವದೆಹಲಿ ಮಾ. 29 – ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಇಬ್ಬರು ಆರೋಪಿಗಳ ಮಾಹಿತಿ ನೀಡಿದವರಿಗೆ ತಲಾ ಹತ್ತು ಲಕ್ಷ ರೂ. ಬಹುಮಾನ ನೀಡಲಾಗುವುದು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಘೋಷಿಸಿದೆ. ಮುಸಾವಿರ್ ಹುಸೇನ್ ಶಾಜಿಬ್ ಹಾಗೂ ಅಬ್ದುಲ್ ಮತೀನ್ ಅಹಮದ್ ತಾಹಾ ಸುಳಿವಿಗಾಗಿ ಬಹುಮಾನ ನೀಡುವುದಾಗಿ ಎನ್.ಐ.ಎ. ಹೇಳಿದೆ. ಅಲ್ಲದೇ, ತಾಹಾ ವಿಗ್ನೇಶ್ ಡಿ. ಎಂಬ ಹಿಂದೂ ಹೆಸರನ್ನೂ ಬಳಸಿದ್ದು ಕಂಡು ಬಂದಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.ತಾಹಾ ಹಿಂದೂ ಗುರುತಿನ ದಾಖಲೆಗಳನ್ನು ಬಳಸಿದ್ದಾನೆ. ಆಧಾರ್ ಕಾರ್ಡ್‌ನಲ್ಲಿ ಹೆಸರು ಫೋರ್ಜರಿ ಮಾಡಿದ್ದಾನೆ ಎಂದು ಎನ್.ಐ.ಎ. ಹೇಳಿದೆ.

## ಯಲವಟ್ಟಿಯಲ್ಲಿ ನಾಳೆ ರಥೋತ್ಸವ



ಮಲೇಬೆನ್ನೂರಿನ ಯಲವಟ್ಟಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ನಾಳೆ ಭಾನುವಾರ ಬೆಳಿಗ್ಗೆ 7 ಗಂಟೆಗೆ ಜರುಗಲಿದೆ. ಇಂದು ರಾತ್ರಿ 8.30ಕ್ಕೆ ಮಹಾರಥಕ್ಕೆ ಕಳಸಧಾರಣೆ ಮಾಡಲಾಗುವುದು. ಭಾನುವಾರ ಬೆಳಿಗ್ಗೆ ರಥೋತ್ಸವದ ನಂತರ ವಿವಿಧ ಹರಕೆ ಸೇವೆಗಳು ನಡೆಯಲಿದ್ದು, ಸಂಜೆ 5 ಗಂಟೆಗೆ ಸ್ವಾಮಿಯ ಮುಳ್ಳು ಗದ್ದಿಗೆ ತುಳಿಯುವುದು, ನಂತರ ಓಕುಳಿ, ಭೂತನ ಸೇವೆಯೊಂದಿಗೆ ರಥೋತ್ಸವಕ್ಕೆ ತೆರೆ ಬೀಳುವುದು.

## ಅಸಾಧ್ಯವನ್ನು ಸಾಧಿಸುವುದೇ ಯಶಸ್ಸು : ಜಗನ್ನಾಥ ನಾಡಿಗೇರ್



ದಾವಣಗೆರೆ ಮಾ.29- ನಂಬಿಕೆ ಮತ್ತು ಆತ್ಮವಿಶ್ವಾಸದಿಂದ ಯಶಸ್ಸು ಸಾಧ್ಯ. ಆದ್ದರಿಂದ ಅಸಾಧ್ಯವನ್ನು ಸಾಧಿಸುವುದೇ ಯಶಸ್ಸು ಎಂದು ಸತ್ಯಸಾಯಿ ವಿದ್ಯಾಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಜಗನ್ನಾಥ ನಾಡಿಗೇರ್ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಸಹಯೋಗದಿಂದ ವಿದ್ಯಾಚೇತನ ಪಿ.ಯು ಕಾಲೇಜಿನಲ್ಲಿ ನಿನ್ನೆ ನಡೆದ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಿದ್ಯಾರ್ಥಿ ಜೀವನದ ಯಶಸ್ಸು' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಜಗತ್ತಿನಲ್ಲಿ ಯಾವುದೂ ಉಚಿತವಾಗಿ ಸಿಗುವುದಿಲ್ಲ. ಉಚಿತವಾಗಿ ಸಿಗುವುದೆಲ್ಲವೂ ಖಚಿತವಲ್ಲ. ಹಾಗೆಯೇ ಪರಿಶ್ರಮವಿಲ್ಲದ ಯಶಸ್ಸು ಖಚಿತವಾಗಿರುವುದಿಲ್ಲ ಎಂದು ಹೇಳಿದರು.

ಗುರಿ ಮತ್ತು ಕಠಿಣ ಶ್ರಮದ ಸಾಮರ್ಥ್ಯ ಹೊಂದಿದ ವಿದ್ಯಾರ್ಥಿಯು ಯಶಸ್ಸನ್ನು ಸಾಧಿಸುತ್ತಾನೆ. ಆದ್ದರಿಂದ ವಿದ್ಯಾರ್ಥಿಗಳು ಜೀವನದಲ್ಲಿ ಆರೋಗ್ಯಕರ ಹವ್ಯಾಸ ರೂಢಿಸಿಕೊಳ್ಳುವಂತೆ ಕಿವಿಮಾತು ಹೇಳಿದರು.

ಬಿಐಇಟಿ ಕಾಲೇಜಿನ ನಿರ್ದೇಶಕ ಡಾ.ವೈ ವೃಷಭೇಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೇಶ ಮತ್ತು ರಾಜ್ಯದ ಇತಿಹಾಸದಲ್ಲಿ ದತ್ತಿಗಳು ಪ್ರಮುಖ ಪಾತ್ರ ವಹಿಸಿವೆ ಮತ್ತು ಕೆಲವರು ಶಿಕ್ಷಣ ಕ್ಷೇತ್ರದಲ್ಲೂ ದತ್ತಿಗಳನ್ನು ಸ್ಥಾಪಿಸಿ ನೆರವಾಗಿದ್ದಾರೆ. ಹಾಗೆಯೇ ಕನ್ನಡ ಸಾಹಿತ್ಯ ಪರಿಷತ್‌ನಲ್ಲೂ ಕಾರ್ಯಕ್ರಮ ಆಯೋಜಿಸುವಲ್ಲಿ ಈ ದತ್ತಿಗಳು ನೆರವಾಗಿವೆ ಎಂದು ಹೇಳಿದರು.

ತಾಲ್ಲೂಕು ಕಸಾಪ ನಿರ್ದೇಶಕರಾದ ಬಿ.ವಿ. ಪರಿಮಳ ಜಗದೀಶ್ ಅವರು ದತ್ತಿ ದಾನಿಗಳನ್ನು ಪರಿಚಯಿಸಿದರು. ಅಭಿಜ್ಞಾ ಸ್ವಾಗತಿಸಿದರು. ವಿದ್ಯಾರ್ಥಿ ರಿಷಿತ್ ಕುಮಾರ್ ನಿರೂಪಿಸಿದರು. ಎಂ.ಎನ್ ಇಂಚರಾ ವಂದಿಸಿದರು.

ಕಾಲೇಜಿನ ಪ್ರಾಚಾರ್ಯ ಎಚ್.ಎನ್ ಪ್ರದೀಪ್, ತಾಲ್ಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ, ದತ್ತಿದಾನಿ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನಿರ್ದೇಶಕ ಸಿ.ಜಿ. ಜಗದೀಶ್ ಕೂಲಂಬಿ, ತಾಲ್ಲೂಕು ಕಸಾಪ ನಿರ್ದೇಶಕ ಷಡಕ್ಷರಪ್ಪ ಎಂ.ಬೇತೂರು, ಮಮತಾ ರುದ್ರಮುನಿ ಮತ್ತು ಕಾಲೇಜಿನ ಸಿಬ್ಬಂದಿ ಇದ್ದರು.

## ಚುನಾವಣೆ : ಮತದಾರರ ಜಾಗೃತಿಗೆ ಬೈಕ್ ರ‍್ಯಾಲಿ



ದಾವಣಗೆರೆ, ಮಾ. 29 - ಲೋಕಸಭಾ ಚುನಾವಣೆ ನಡೆಯುತ್ತಿದ್ದು ಮೇ 7 ರಂದು ನಡೆಯುವ ಮತದಾನದಲ್ಲಿ ಎಲ್ಲ ವಿಶೇಷ ಚೇತನರು ಶೇ. 100 ರಷ್ಟು ಮತದಾನ ಮಾಡಬೇಕೆಂದು ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ ಅಂಗವಾಗಿ ಸ್ವೀಪ್ ಸಮಿತಿಯಿಂದ, ಜಿಲ್ಲಾ ಪಂಚಾಯತ್‌ನಿಂದ, ಜಿಲ್ಲಾಧಿಕಾರಿಗಳ ಕಚೇರಿವರೆಗೆ ಏರ್ಪಡಿಸಲಾಗಿದ್ದ ವಿಶೇಷ ಚೇತನರ ಬೈಕ್ ರ‍್ಯಾಲಿಗೆ ಹಸಿರು ನಿಶಾನೆ ತೋರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿಶೇಷ ಚೇತನರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೇ. 97 ರಷ್ಟು ಮನತದಾನ ಮಾಡಿದ್ದು, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಶೇ. 100 ರಷ್ಟು ಮತದಾನ ಮಾಡುವ ವಿಶ್ವಾಸವಿದೆ. ಚುನಾವಣೆ ಎಂಬುದು ಪ್ರಜಾ ಪ್ರಭುತ್ವದ ಹಬ್ಬ, ಈ ಹಬ್ಬವನ್ನು ಎಲ್ಲರೂ ಸೇರಿ ಮತದಾನ ಮಾಡುವ ಮೂಲಕ ಅತ್ಯುತ್ತಮ ಪ್ರಜಾಪ್ರಭುತ್ವದ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ ಎಂದರು.

ರ‍್ಯಾಲಿಯು ಜಿಲ್ಲಾ ಪಂಚಾಯತ್ ಆವರಣದಿಂದ ಹದಡಿ ರಸ್ತೆ, ಜಯದೇವ ಸರ್ಕಲ್, ಪಿ.ಬಿ ರೋಡ್, ಮಹಾನಗರ ಪಾಲಿಕೆ, ಅಂತಿಮವಾಗಿ ಜಿಲ್ಲಾಧಿಕಾರಿಗಳ ಕಚೇರಿ ತಲುಪಿತು.

ರ‍್ಯಾಲಿಯ ಸಮಾರೋಪದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಭಾಗವಹಿಸಿ ಮಾತನಾಡಿ, ಎಲ್ಲರ ಪಾಲ್ಗೊಳ್ಳುವಿಕೆಯೇ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವದಲ್ಲಿ ಮತದಾನ ಪ್ರಜೆಗಳ ಅಧಿಕಾರ, ಈ ಅಧಿಕಾರವನ್ನು ಮೇ 7 ರಂದು ಮತ ಚಲಾಯಿಸುವ ಮೂಲಕ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಬಿ. ಸುರೇಶ ಇಟ್ನಾಳ್, ಪಾಲಿಕೆ ಆಯುಕ್ತ ರೇಣುಕಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್, ವಿಕಲ ಚೇತನರ ಕಲ್ಯಾಣಾಧಿಕಾರಿ ಕೆ.ಕೆ. ಪ್ರಕಾಶ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಾಂಗ್ರೆಸ್ ಆರೋಪದ ಬದಲು ಕಾನೂನು ಪಾಲಿಸಲಿ : ಬಿಜೆಪಿ

ನವದೆಹಲಿ, ಮಾ. 29 – ಆದಾಯ ತೆರಿಗೆ ಇಲಾಖೆ ಹಾಗೂ ನ್ಯಾಯಾಂಗದ ಮೇಲೆ ಆರೋಪ ಮಾಡುವ ಬದಲು ಕಾನೂನು ಪ್ರಕ್ರಿಯೆಗಳನ್ನು ಪಾಲಿಸಬೇಕು. ತೆರಿಗೆ ಬದ್ಧತೆಗಳನ್ನು ಈಡೇರಿಸಬೇಕು ಎಂದು ಬಿಜೆಪಿ ಹೇಳಿದೆ.

ತನಗೆ 1,800 ಕೋಟಿ ರೂ.ಗಳ ತೆರಿಗೆ ನೋಟಿಸ್ ಕಳಿಸಿರುವುದಕ್ಕಾಗಿ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿತ್ತು. ಈ ಟೀಕೆಗಳನ್ನು ತಳ್ಳಿ ಹಾಕಿರುವ ಬಿಜೆಪಿ, ತನಗೆ ನಿಯಮಗಳಿಂದ ವಿನಾಯಿತಿ ಇರಬೇಕು ಎಂದು ಕಾಂಗ್ರೆಸ್ ಪಕ್ಷದ ಒಂದು ವರ್ಗ ಬಯಸಿದೆ. ಆಧುನಿಕ ಭಾರತದಲ್ಲಿ ಅದು ಸಾಧ್ಯವಿಲ್ಲ ಎಂದು ಹೇಳಿದೆ. ಕಾಂಗ್ರೆಸ್ ನಾಯಕರು ತಮ್ಮ ಹತಾಶೆ ಹೊರ ಹಾಕುತ್ತಿದ್ದಾರೆ. ಮಾಧ್ಯಮಗಳಲ್ಲಿ ಹೇಳಿಕೆ ನೀಡುವ ಬದಲು, ಕಾನೂನು ಪ್ರಕ್ರಿಯೆ ಪಾಲಿಸಬೇಕು ಎಂದು ಬಿಜೆಪಿ ವಕ್ತಾರ ಜಫರ್ ಇಸ್ಲಾಮ್ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆ ವಿಳಂಬ ಮಾಡಿದೆ. ಅಲ್ಲದೇ, ತನ್ನ ಆದಾಯವನ್ನು ಕಡಿಮೆಯಾಗಿ ತಿಳಿಸಿದೆ. ಸರಿಯಾದ ಪ್ರಕ್ರಿಯೆ ಪಾಲಿಸಲು ವಿಫಲವಾಗಿದೆ ಎಂದು ಜಫರ್ ಇಸ್ಲಾಮ್ ತಿಳಿಸಿದ್ದಾರೆ.

## ತಮ್ಮ ಸರ್ಕಾರ ಬಂದಾಗ ಕ್ರಮ : ಬಿಜೆಪಿಗೆ ರಾಹುಲ್ ಎಚ್ಚರಿಕೆ

ನವದೆಹಲಿ, ಮಾ. 29 – ಸರ್ಕಾರ ಬದಲಾದಾಗ ಪ್ರಜಾಪ್ರಭುತ್ವ ವಿವಸ್ತ್ರಗೊಳಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ 1,800 ಕೋಟಿ ರೂ.ಗಳ ತೆರಿಗೆ ನೋಟಿಸ್ ಕಳಿಸಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ರಾಹುಲ್ ಗಾಂಧಿ, ಪ್ರಜಾಪ್ರಭುತ್ವದ ಮೇಲೆ ಮತ್ತೊಮ್ಮೆ ದಾಳಿ ನಡೆಸಲು ಯಾರಿಗೂ ಧೈರ್ಯ ಬಾರದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಇದು ನನ್ನ ಗ್ಯಾರಂಟಿ ಎಂದಿದ್ದಾರೆ. ಆ ಮೂಲಕ ರಾಹುಲ್ ಪರೋಕ್ಷವಾಗಿ ಬಿಜೆಪಿಗೆ ಎಚ್ಚರಿಕೆ ನೀಡಿದ್ದಾರೆ.

## ಸರ್ದಾರ್ ಸೇವಾಲಾಲ್ ಸ್ವಾಮಿಗಳ ಆಶೀರ್ವಾದ ಪಡೆದ ಡಾ. ಪ್ರಭಾ ಎಸ್ಸೆಸ್ಸೆಂ



ದಾವಣಗೆರೆ, ಮಾ. 29- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಶ್ರೀ ಸೇವಾಲಾಲ್ ಬಂಜಾರ ಗುರು ಪೀಠಕ್ಕೆ ಭೇಟಿ ನೀಡಿ ಸರ್ದಾರ್ ಸೇವಾಲಾಲ್ ಸ್ವಾಮಿಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ರೇಣುಕಾ ಬಾಯಿ ವೆಂಕಟೇಶ್ ನಾಯ್ಕ್, ವೆಂಕಟೇಶ್ ನಾಯ್ಕ್, ತಿಮ್ಮೇಶ್, ಕೃಷನಾಯ್ಕ್ ಸೇರಿದಂತೆ, ಅನೇಕರು ಉಪಸ್ಥಿತರಿದ್ದರು.

## ಚುನಾವಣೆ : ಕಾನೂನು ನಿಯಮ ಪಾಲಿಸುವಂತೆ ಎಚ್ಚರಿಕೆ

### ಹೊನ್ನಾಳಿ ತಾಲ್ಲೂಕಿನಲ್ಲಿ ಚೆಕ್‌ಪೋಸ್ಟ್ ಪರಿಶೀಲಿಸಿದ ಜಿಲ್ಲಾಧಿಕಾರಿ ಡಾ. ಎಂ.ವಿ.ವೆಂಕಟೇಶ್



ಹೊನ್ನಾಳಿ, ಮಾ.29- ಚುನಾವಣೆಯಲ್ಲಿ ಕಾನೂನು ನಿಯಮ ಪಾಲಿಸುವಂತೆ ಮತ್ತು ಕರ್ತವ್ಯ ಲೋಪವಾಗದಂತೆ ಕಾರ್ಯ ನಿರ್ವಹಿಸಲು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಡಾ. ಎಂ.ವಿ ವೆಂಕಟೇಶ್ ಸೂಚನೆ ನೀಡಿದರು.

ಗೊಲ್ಲರಹಳ್ಳಿ ಮತ್ತು ಹೊಳೆಹರಳಹಳ್ಳಿ ಚೆಕ್ ಪೋಸ್ಟ್‌ಗಳನ್ನು ಪರಿಶೀಲನೆ ನಡೆಸಿದ ವೇಳೆ ಅವರು ಮಾತನಾಡಿದರು.

ಮತದಾರರಿಗೆ ಆಮಿಷ ಒಡ್ಡಲು ವಾಹನಗಳಲ್ಲಿ ಹಣ, ಸೀರೆ, ಮದ್ಯ ಮತ್ತಿತರೆ ವಸ್ತುಗಳು ಸಾಗಣೆಯಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ. ಆದ್ದರಿಂದ ಚೆಕ್ ಪೋಸ್ಟ್‌ಗಳಲ್ಲಿ ಎಲ್ಲಾ ವಾಹನಗಳನ್ನು ಕಡ್ಡಾಯವಾಗಿ ತಪಾಸಣೆ ನಡೆಸಿ, ನೀತಿ ಸಂಹಿತೆ ಉಲ್ಲಂಘನೆ ಆಗದಂತೆ ಜಾಗೃತಿ ವಹಿಸಬೇಕು ಎಂದರು.

ವಾಹನ ತಪಾಸಣೆಗೊಳಿಸದೇ ನಿರ್ಲಕ್ಷ್ಯ ತೋರಿದರೆ, ಚೆಕ್ ಪೋಸ್ಟ್‌ನಲ್ಲಿ ಕಾರ್ಯ ನಿರ್ವಹಿಸುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ನಂತರ ಪಟ್ಟಣದ ಗಂಗಮ್ಮ ವೀರಭದ್ರ ಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿರುವ ಇವಿಎಂ ಸ್ಟ್ರಾಂಗ್ ರೂಂಗಳಿಗೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಸಹಾಯಕ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಚುನಾವಣೆಗೆ ಸಂಬಂಧಿಸಿದ ಮಾಹಿತಿ ತಿಳಿಸುವ ಜತೆಗೆ ಪ್ಲಾಸ್ಟಿಕ್ ರಹಿತ ಚುನಾವಣೆ ನಡೆಸುವ ಬಗ್ಗೆ ಮಾಹಿತಿ ನೀಡಿದರು.

ಸಹಾಯಕ ಚುನಾವಣಾಧಿಕಾರಿ ಅಭಿಷೇಕ್, ತಹಶೀಲ್ದಾರ್ ಪುರಂದರ ಹೆಗ್ಡೆ, ನ್ಯಾಮತಿ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿ, ಎಸ್.ಎಸ್.ಟಿ. ತಂಡದ ಉಪನ್ಯಾಸಕ ಎಚ್.ದೊಡ್ಡಸ್ವಾಮಿ, ರಾಜಸ್ವ ನಿರೀಕ್ಷಕರಾದ ಎಸ್. ಜಯಪ್ರಕಾಶ್, ದಿನೇಶ್ ಬಾಬು, ಬಿ.ಎಂ. ರಮೇಶ್, ಗೊಲ್ಲರಹಳ್ಳಿ ಸಂತೋಷ್ ಮತ್ತಿತರರಿದ್ದರು.

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
14 ದಿನಗಳು ಚಾರ್‌ಧಾಮ್ ವಿಶೇಷ ಯಾತ್ರೆ ಜೂನ್ 2024 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ಕಾಶಿ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ದಗಯಾ, ಪ್ರಯಾಗ್‌ರಾಜ್,
ಅಮರ್‌ನಾಥ, ವೈಷ್ಣೋದೇವಿ ಪ್ರವಾಸ
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ರಾಮೇಶ್ವರಂ ಯಾತ್ರೆ ಏಪ್ರಿಲ್ 11, 2024 ರಿಂದ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

# ಮಹಿಳೆ ಅಡುಗೆ ಮನೆಗೆ ಮಾತ್ರ ಸೀಮಿತವಲ್ಲ

## ಹರಿಹರ ವಿಧಾನಸಭಾ ಕ್ಷೇತ್ರದಲ್ಲಿ ಮತಯಾಚಿಸಿದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ



ಹರಿಹರ, ಮಾ.29- ಹಿಂದೆ ಮಹಿಳೆ ಅಡುಗೆ ಮನೆಗೆ ಮಾತ್ರ ಸೀಮಿತ ಅನ್ನುವ ಮಾತಿತ್ತು. ಈಗಿನ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುವ ಮೂಲಕ ನಾವು ಅಡುಗೆ ಮನೆಗೆ ಸೀಮಿತವಲ್ಲ, ಅಧಿಕಾರವನ್ನೂ ಮಾಡುತ್ತೇವೆ ಎಂದು ಸಾಬೀತು ಪಡಿಸುತ್ತಿದ್ದಾರೆ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.

ಹರಿಹರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 15 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಪ್ರಚಾರ ಕಾರ್ಯ ನಡೆಸಿ ಮಾತನಾಡಿದ ಅವರು, ಅಂದು ಚಿತ್ರದುರ್ಗದ ಒನಕೆ ಓಬವ್ವ ಹೈದರಾಲಿ ಸೈನ್ಯ ಕಂಡು ಹೆದರದೆ ಒಬ್ಬೊಂಟಿಯಾಗಿ ಹೋರಾಡಿ ಇಡೀ ಸೈನ್ಯವನ್ನೇ ಸರ್ವನಾಶ ಮಾಡಿದಳು. ಅಂತಹ ಧೀರ ಮಹಿಳೆ ನಮ್ಮ - ನಿಮ್ಮಂತಹ ಮಹಿಳೆಯರಿಗೆ ಆದರ್ಶವಾಗಿದ್ದಾರೆ ಎಂದರು.

ಮಹಿಳೆಯರು ರಾಜಕಾರಣಕ್ಕೆ ಬರಬೇಕು ಅನ್ನೋ ದೃಢ ಸಂಕಲ್ಪದಿಂದ ನನ್ನಂತಹ ಮಹಿಳೆಯರಿಗೆ ಲೋಕಸಭೆಗೆ ಹೋಗಲು ಅವಕಾಶ ಮಾಡಿಕೊಟ್ಟಿದ್ದಾರೆ. ನೀವೆಲ್ಲ ನನ್ನನ್ನು ಗೆಲ್ಲಿಸಿ ಕಳುಹಿಸುವ ಮೂಲಕ ನರೇಂದ್ರ ಮೋದಿ ಅವರ ಕೈ ಬಲಪಡಿಸಬೇಕು. ವಿಕಸಿತ ಭಾರತ ನಿರ್ಮಾಣಕ್ಕೆ ಈ ಮೂಲಕ ನೀವು ಸಹಾಯ ಮಾಡಬೇಕು ಎಂದು ಮನವಿ ಮಾಡಿದರು.

ಹರಿಹರದ ಶಾಸಕ ಬಿ.ಪಿ.ಹರೀಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಜಿ.ಎಸ್. ಅಶ್ವಿನಿ, ಪ್ರೇಮಮ್ಮ, ಜಯಮ್ಮ, ಬಿ.ಎಂ.ಮರುಳು ಸಿದ್ದಪ್ಪ, ಸಿದ್ದೇಗೌಡರು, ಹನುಮಂತಗೌಡರು, ಪರಮೇಶ್ವರಪ್ಪ, ಶಾಂತಕುಮಾರ್, ಮಹಿಳಾ ಮೋರ್ಚಾದ ಸಾಕ್ಷಿ ಸಿಂಧಿ, ರೂಪಾ, ಗ್ಯಾರಳ್ಳಿ ಶಿವಣ್ಣ, ರಾಜು ಮತ್ತು ಸಾವಿರಾರು ಬಿಜೆಪಿ ಕಾರ್ಯಕರ್ತರು ಪ್ರಚಾರದುದ್ದಕ್ಕೂ ಸಾಥ್ ನೀಡಿದರು.

**ವಿವಿಧೆಡೆ ಪ್ರಚಾರ :** ಸಾಲಕಟ್ಟೆ ಗ್ರಾಮದ ಕರಿಯಮ್ಮ ದೇವಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದರು. ಬಳಿಕ ಬೂತ್ ಅಧ್ಯಕ್ಷ ಅಡಕಿ ಶಿವಣ್ಣ, ನಾಗಪ್ಪಜ್ಜ, ಸಿರಿಗೆರೆ ಚಂದ್ರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು.

ಬೇವಿನಹಳ್ಳಿ ಗ್ರಾಮದಲ್ಲಿ ತೆರೆದ ವಾಹನದಲ್ಲಿ ಪ್ರಚಾರ ನಡೆಸಿದ ಗಾಯತ್ರಿ ಸಿದ್ದೇಶ್ವರ ಅವರು ಕಾಶಿ ವಿಶ್ವನಾಥ ಮತ್ತು ಗಣಪತಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಬಳಿಕ ಗ್ರಾಪಂ ಸದಸ್ಯ ಬೂದಾಳ್ ಹಾಲೇಶ್ ಮತ್ತು ಉಮೇಶ್ ನಿವಾಸಕ್ಕೆ ಭೇಟಿ ನೀಡಿ ಮತಯಾಚನೆ ಮಾಡಿದರು.

ಕಡ್ಲೇಗೊಂದಿ ಗ್ರಾಮದಲ್ಲಿ ತೆರೆದ ವಾಹನದ ಮೂಲಕ ಮತ ಯಾಚಿಸಿ, ಬಸವೇಶ್ವರ ದೇವಾಲಯಕ್ಕೆ ತೆರಳಿ ದೇವರ ದರ್ಶನ ಪಡೆದರು. ಗ್ರಾಮದ ಬಸಪ್ಪ ರೆಡ್ಡಿ ನಿವಾಸಕ್ಕೆ ಭೇಟಿ ನೀಡಿ ಉಭಯ ಕುಶಲೋಪರಿ ವಿಚಾರಿಸಿದರು.

ಸಲಗನಹಳ್ಳಿ ಗ್ರಾಮದಲ್ಲೂ ಪ್ರಚಾರ ನಡೆಸಿದ ಗಾಯತ್ರಿ ಸಿದ್ದೇಶ್ವರ, ಆಂಜನೇಯ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದರು. ಬೆಳ್ಳೂಡಿ ಗ್ರಾಮದಲ್ಲಿ ಮತಯಾಚನೆ ನಡೆಸಿ, ಉಡಸಲಾಂಭಿಕಾ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದರು.

ಬ್ಯಾಲದಹಳ್ಳಿ ಗ್ರಾಮದ ಬೂತ್ ಅಧ್ಯಕ್ಷ ಮಂಜಣ್ಣ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು. ಗ್ರಾಮದಲ್ಲಿ ಮತಯಾಚನೆ ಬಳಿಕ ಉಡಸಲಾಂಭಿಕಾ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಎಕ್ಕೇಗೊಂದಿ ಗ್ರಾಮದಲ್ಲಿ ಅದ್ದೂರಿ ಪ್ರಚಾರ ನಡೆಸಿದ ಗಾಯತ್ರಿ ಸಿದ್ದೇಶ್ವರ ಅವರು ಗ್ರಾಮದ ಬಸವೇಶ್ವರ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಭಾನುವಳ್ಳಿ ಗ್ರಾಮದಲ್ಲೂ ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸಿ ಪ್ರಚಾರ ಕಾರ್ಯ ನಡೆಸಿದರು. ವಕೀಲ ಪಿ.ಪಾಟೀಲ್ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು.

ರಾಮತೀರ್ಥ, ನಾಗೇನಹಳ್ಳಿ ಹರಗನಹಳ್ಳಿ, ಹಲಸಬಾಳು ಗ್ರಾಮಗಳಲ್ಲೂ ಗ್ರಾಮ ದೇವರಿಗೆ ಪೂಜೆ ಸಲ್ಲಿಸಿ, ಮತಯಾಚನೆ ಮಾಡಿದರು.

# ರಷ್ಯಾದಲ್ಲಿ ಹೆಚ್ಚುತ್ತಿರುವ ಅಮೆರಿಕನ್ನರ ಬಂಧನ

ತಲ್ಲಿನ್ (ಎಸ್ಟೊನಿಯ), ಮಾ. 29 - ರಷ್ಯಾದಲ್ಲಿ ಬಂಧನಕ್ಕೊಳಗಾಗುತ್ತಿರುವ ಅಮೆರಿಕದವರ ಸಂಖ್ಯೆ ನಿರಂತರವಾಗಿ ಏರಿಕೆಯಾಗುತ್ತಿದೆ. ಈ ಬಂಧನದ ಭರಾಟೆ ಅಮೆರಿಕ ಹಾಗೂ ರಷ್ಯಾ ನಡುವಿನ ಶೀತಲ ಸಮರದ ದಿನಗಳನ್ನು ನೆನಪಿಗೆ ತರುತ್ತಿದೆ.

ಉಭಯ ದೇಶಗಳ ನಡುವಿನ ಸಂಬಂಧ ಹದಗೆಡುತ್ತಿರುವಂತೆಯೇ, ರಷ್ಯಾದಲ್ಲಿ ಅಮೆರಿಕದವರ ಬಂಧನ ಹೆಚ್ಚಾಗುತ್ತಿದೆ ಎಂದು ಆರೋಪಿಸಲಾಗುತ್ತಿದೆ. ಆದರೆ, ರಷ್ಯಾ ಅಧಿಕಾರಿಗಳು ಈ ಆರೋಪ ತಳ್ಳಿ ಹಾಕಿದ್ದು, ಕಾನೂನು ಉಲ್ಲಂಘಿಸಿದವನ್ನು ಬಂಧಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ರಷ್ಯಾದಲ್ಲಿ ಬಂಧಿತ ಅಮೆರಿಕನ್ನರು ಹಾಗೂ ಅಮೆರಿಕದಲ್ಲಿ ಬಂಧಿತರ ರಷ್ಯನ್ನರ ಪೈಕಿ ಕೆಲವರನ್ನು ವಿನಿಮಯ ಮಾಡಿಕೊಳ್ಳಲಾಗಿದೆ. ಉಳಿದವರ ವಿನಿಮಯ ಪ್ರಕ್ರಿಯೆ ಇನ್ನೂ ಅಸ್ಪಷ್ಟವಾಗಿದೆ.

ರಷ್ಯಾ ತನ್ನ ಬಹುತೇಕ ಮಾತುಕತೆಯ ಮಾರ್ಗಗಳನ್ನು ಮುಚ್ಚಿದೆ. ಈಗ ಮುಖಭಂಗಕ್ಕೆ ಗುರಿಯಾಗದೇ ಮಾತುಕತೆಗೆ ಬರುವ ದಾರಿ ಕಂಡು ಬರುತ್ತಿಲ್ಲ. ಹೀಗಾಗಿ ಅಮೆರಿಕದವರನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಳ್ಳಲಾಗುತ್ತಿದೆ ಎಂದು ರಷ್ಯಾದ ಮಾಜಿ ರಾಯಭಾರಿ ಬೋರಿಸ್ ಬೊಂಡರೆವ್ ಹೇಳಿದ್ದಾರೆ. 2022ರಲ್ಲಿ ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ನಂತರ, ಅವರು ರಾಯಭಾರಿ ಹುದ್ದೆ ತೊರೆದಿದ್ದರು.

ಅಮೆರಿಕದ ದಿ ವಾಲ್ ಸ್ಟ್ರೀಟ್ ಪತ್ರಕರ್ತ ಇವಾನ್ ಗೆರ್‌ಶ್ಕೊವಿಕ್ ಅವರನ್ನು ಬಂಧಿಸಿ ವರ್ಷವಾಗುತ್ತಾ ಬಂದಿದೆ. ಗೂಢಚಾರಿಕೆ ಆರೋಪದ ಮೇಲೆ ಅವರನ್ನು ಬಂಧಿಸಲಾಗಿತ್ತು.

ಪತ್ರಕರ್ತನ ವಿರುದ್ಧದ ಆರೋಪಗಳಿಗೆ ರಷ್ಯಾ ಇದುವರೆಗೂ ಯಾವುದೇ ಸಾಕ್ಷಿಗಳನ್ನು ಬಹಿರಂಗ ಪಡಿಸಿಲ್ಲ. ಈತನ ಮೇಲಿನ ಆರೋಪಗಳನ್ನು ದಿ ವಾಲ್ ಸ್ಟ್ರೀಟ್ ಹಾಗೂ ಅಮೆರಿಕ ಸರ್ಕಾರಗಳು ತಳ್ಳಿ ಹಾಕಿವೆ.

ಕಾರ್ಪೊರೇಟ್ ಭದ್ರತಾ ಅಧಿಕಾರಿ ಪೌಲ್ ವೆಲಾನ್ ಅವರನ್ನು 2018ರಲ್ಲಿ ಬಂಧಿಸಲಾಗಿತ್ತು. ಎರಡು ವರ್ಷಗಳ ನಂತರ 16 ವರ್ಷಗಳ ಜೈಲು ಶಿಕ್ಷೆಗೆ ಗುರಿ ಪಡಿಸಲಾಗಿದೆ. ಸ್ನೇಹಿತನ ಮದುವೆಗಾಗಿ ರಷ್ಯಾಗೆ ಬಂದಿದ್ದಾಗಿ ವೆಲಾನ್ ಹೇಳಿದ್ದಾರೆ.

ಹಲವಾರು ವರ್ಷಗಳಿಂದ ರಷ್ಯಾದಲ್ಲಿದ್ದ ಸಂಗೀತಗಾರ ಟ್ರಾವಿಸ್ ಲೀಕ್ ಅವರನ್ನು ಕಳೆದ ವರ್ಷ ಮಾದಕದ ಆರೋಪದ ಮೇಲೆ ಬಂಧಿಸಲಾಗಿದೆ. ಮಾಸ್ಕೋದಲ್ಲಿ ಶಿಕ್ಷಕರಾಗಿದ್ದ ಮಾರ್ಕ್ ಫೊಗೆಲ್ ಅವರಿಗೆ ಮಾದಕ ಆರೋಪದ ಮೇಲೆ 14 ವರ್ಷದ ಜೈಲು ಶಿಕ್ಷೆ ವಿಧಿಸಲಾಗಿದೆ. ದ್ವಿಪೌರತ್ವ ಹೊಂದಿದ್ದ ಅಲ್ಸು ಕುರ್ಮಶೇವಾ ಹಾಗೂ ಸೆನಿಯಾ ಖಾವನಾ ಅವರನ್ನೂ ಬಂಧಿಸಲಾಗಿದೆ.

ರಷ್ಯಾದಲ್ಲಿ ಎಷ್ಟು ಸಂಖ್ಯೆಯ ಅಮೆರಿಕನ್ನರನ್ನು ಬಂಧಿಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಗೆರ್‌ಶ್ಕೊವಿಚ್ ಹಾಗೂ ವೆಲಾನ್ ಪ್ರಕರಣಗಳು ಹೆಚ್ಚು ಚರ್ಚೆಗೆ ಕಾರಣವಾಗಿವೆ.

ಬಂಧಿತರ ವಿನಿಮಯದ ಮೂಲಕ ಹಲವರನ್ನು ಬಿಡಿಸಿಕೊಳ್ಳುವಲ್ಲಿ ಅಮೆರಿಕ ಯಶಸ್ಸು ಕಂಡಿದೆ. 2022ರಲ್ಲಿ ಡಬ್ಲ್ಯೂ.ಎನ್.ಬಿ.ಎ. ತಾರೆ ಬ್ರಿಟನ್ನಿ ಗ್ರೈನರ್ ಹಾಗೂ ಹಿರಿಯ ಸೈನಿಕ ಟ್ರೆವರ್ ರೀಡ್ ಅವರನ್ನು ವಿನಿಮಯ ಮಾಡಿಕೊಳ್ಳಲಾಗಿತ್ತು.

ಇದಕ್ಕೆ ಪ್ರತಿಯಾಗಿ ಶಸ್ತ್ರಾಸ್ತ್ರ ವ್ಯಾಪಾರಿ ವಿಕ್ಟರ್ ಬೌಟ್ ಹಾಗೂ ಪೈಲಟ್ ಯರೊಶೆಂಕೊ ಅವರನ್ನು ಅಮೆರಿಕ ಬಿಡುಗಡೆ ಮಾಡಿತ್ತು. ಆದರೆ, ಬಂಧಿತ ಉಳಿದವರ ಬಿಡುಗಡೆ ಬಗ್ಗೆ ಯಾವುದೇ ಸ್ಪಷ್ಟತೆ ದೊರೆತಿಲ್ಲ.

ಗೆರ್‌ಶ್ಕೊವಿಕ್ ಹಾಗೂ ವೆಲಾನ್ ಬಿಡುಗಡೆಗಾಗಿ ಜರ್ಮನಿಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವಾಡಿಮ್ ಕ್ರಾಸಿಕೊವ್ ಹಸ್ತಾಂತರಕ್ಕಾಗಿ ರಷ್ಯಾ ಕೇಳುತ್ತಿದೆ ಎನ್ನಲಾಗುತ್ತಿದೆ.

ಉಭಯ ದೇಶಗಳ ನಡುವಿನ ಸಂಬಂಧಗಳು ಉತ್ತಮವಾಗಿದ್ದಾಗ ವಿನಿಮಯ ಸುಗಮವಾಗಿ ನಡೆಯುತ್ತಿತ್ತು. ಈಗ ಬಂಧಿತರ ಭವಿಷ್ಯ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಕೈಯಲ್ಲಿದೆ ಎಂದು ನ್ಯೂಯಾರ್ಕ್‌ನ ಅಂತರರಾಷ್ಟ್ರೀಯ ವ್ಯವಹಾರಗಳ ಪರಿಣಿತರಾದ ನೀನಾ ಖ್ರುಶ್ಚೇವ್ ಹೇಳಿದ್ದಾರೆ.

# ಶ್ರೀಶೈಲ ಶ್ರೀಗಳು, ಬಸವ ಪ್ರಭು ಶ್ರೀಗಳ ಆಶೀರ್ವಾದ ಪಡೆದ ಗಾಯತ್ರಿ ಸಿದ್ದೇಶ್ವರ





ದಾವಣಗೆರೆ, ಮಾ.29- ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ನಗರದ ವಿವಿಧ ಮಠಗಳಿಗೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು.

ಗುರುವಾರ ಸಂಜೆ ವಿರಕ್ತ ಮಠಕ್ಕೆ ಭೇಟಿ ನೀಡಿ, ಶ್ರೀ ಬಸವ ಪ್ರಭು ಸ್ವಾಮೀಜಿ ಅವರಿಗೆ ಗೌರವ ಸಲ್ಲಿಸಿ, ಆಶೀರ್ವಾದ ಪಡೆದರು.

ಶುಕ್ರವಾರ ಬೆಳಗ್ಗೆ ಶ್ರೀಶೈಲ ಗುರುಪೀಠಕ್ಕೆ ಭೇಟಿ ನೀಡಿ, ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರಿಗೆ ಗೌರವ ಸಲ್ಲಿಸಿ, ಆಶೀರ್ವಾದ ಪಡೆದರು.

ಬಳಿಕ ಮಹಾನಗರ ಪಾಲಿಕೆ ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ನಿವಾಸಕ್ಕೆ ಭೇಟಿ ನೀಡಿ ಉಭಯ ಕುಶಲೋಪರಿ ವಿಚಾರಿಸಿದರು. ಈ ವೇಳೆ ಬಿಜೆಪಿ ಮುಖಂಡರಾದ ಜಿ.ಎಸ್.ಅನಿತ್ ಕುಮಾರ್, ಜಿ.ಎಸ್.ಅಶ್ವಿನಿ, ಜಿ.ಎಲ್.ರಾಜೀವ್, ಗೌತಮ್ ಜೈನ್, ನಜೀರ್ ಮತ್ತಿತರರು ಇದ್ದರು.

# ದೇಶ ಮೋದಿ ಕೈಯಲ್ಲಿದ್ದರೆ ನಾವೆಲ್ಲಾ ಸುರಕ್ಷಿತ



**(1ನೇ ಪುಟದಿಂದ)** ನಡೆಸುತ್ತಿದ್ದು, ಈಗಾಗಲೇ ನಾವು ಗೆದ್ದಿದ್ದೇವೆ. ಚುನಾವಣೆ ಫಲಿತಾಂಶದ ದಿನ ನಾವು ಗೆದ್ದು, ಬರೀ ಅಡುಗೆ ಮಾಡೋದಕ್ಕೆ ಅಲ್ಲ, ಅಧಿಕಾರನೂ ಮಾಡ್ತೀವಿ ಅಂತ ತೋರಿಸುತ್ತೇನೆ ಎಂದರು.

**ಎಲ್ಲೆಲ್ಲಿ ಪ್ರಚಾರ :** ಹಳೇ ಬಾತಿ, ಗುಡ್ಡದ ಕ್ಯಾಂಪ್, ನೀಲಾನ ಹಳ್ಳಿ, ಆವರಗೊಳ್ಳ, ಬೂದಿಹಾಳ್, ಕಡ್ಲೇಬಾಳು, ಓಬಜ್ಜಿಹಳ್ಳಿ, ಮಾಗಾನಹಳ್ಳಿ, ಅರಸಾಪುರ, ಚಿತ್ತಾನಹಳ್ಳಿ, ಬಿ.ಕಲಪನಹಳ್ಳಿ, ಎಲೆಬೇತೂರು, ಪುಟಗನಾಳ್, ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಮಲ್ಲಾಪುರ, ಲಿಂಗದಹಳ್ಳಿ ಸೇರಿದಂತೆ 15 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಪ್ರಚಾರ ಕಾರ್ಯ ನಡೆಸಿದರು. ಅರಸಾಪುರ ಗ್ರಾಮದಲ್ಲಿ ಲಂಬಾಣಿ ಸಮುದಾಯದ ವಸ್ತ್ರ ತೊಟ್ಟು ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಸಂಭ್ರಮಿಸಿ, ಮತಯಾಚನೆ ಮಾಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್.ರಾಜಶೇಖರ್, ಜಿ.ಎಲ್.ರಾಜೀವ್, ಧನಂಜಯ್ ಕಡ್ಲೇಬಾಳು, ಶಿವಕುಮಾರ್, ಕೊಳೇನಳ್ಳಿ ಸತೀಶ್, ದೊಗ್ಗಳ್ಳಿ ವೀರೇಶ್, ಸಿದ್ದೇಶ್, ಬಿ.ಎಸ್.ಜಗದೀಶ್, ಸಂಗನಗೌಡರು, ಗ್ಯಾರಳ್ಳಿ ಶಿವಯೋಗಿ, ಗಣೇಶ್ ಗೌಡರು, ಮಹಾನಗರ ಪಾಲಿಕೆ ಸದಸ್ಯರು ಮತ್ತು ಬಿಜೆಪಿ ಮುಖಂಡರು, ಕಾರ್ಯಕರ್ತರು ಸಾಥ್ ನೀಡಿದರು.

# ಮುಕ್ತ ಮನಸ್ಸಿನಿಂದ ಮತ ಚಲಾಯಿಸಿ: ವೆಂಕಟೇಶ್

**(1ನೇ ಪುಟದಿಂದ)** ಇದರಿಂದ ಒಮ್ಮತ ಅಭಿಪ್ರಾಯದ ಸರ್ಕಾರ ರಚನೆಯಾಗುವುದರೊಂದಿಗೆ ಸರ್ವರ ಒಳಿತು ಇದರಲ್ಲಿ ಅಡಗಿರುತ್ತದೆ ಎಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ಎಲ್ಲರನ್ನೊಳಗೊಂಡ ಸರ್ಕಾರ ರಚನೆಯಾಗಲು ಎಲ್ಲಾ ಮತದಾರರು ತಪ್ಪದೇ ಮತದಾನ ಮಾಡುವ ಮೂಲಕ ತಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಮನವಿ ಮಾಡಿದರು. ಜಿ.ಪಂ ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಕ್ಯಾಂಡಲ್ ಲೈಟ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಒಗ್ಗಟ್ಟಿನ ಹೋರಾಟ

**(1ನೇ ಪುಟದಿಂದ)** ಸ್ಥಗಿತಗೊಂಡಿವೆ. ಕಿಸಾನ್ ಸಮ್ಮಾನ್ ಯೋಜನೆ ಯಡಿ ಕೇಂದ್ರದ 6 ಸಾವಿರ ಜೊತೆಗೆ ನಾನು ಮುಖ್ಯಮಂತ್ರಿ ಆಗಿದ್ದಾಗ 4 ಸಾವಿರ ಹೆಚ್ಚುವರಿಯಾಗಿ ಕೊಡುತ್ತಿದ್ದೆ. ಆ 4 ಸಾವಿರ ನಿಂತು ಹೋಗಿದೆ ಎಂದು ಟೀಕಿಸಿದರು. ಸರ್ಕಾರ ದಿವಾಳಿ ಆಗಿರುವುದಕ್ಕೆ ಬೇರೆ ಉದಾಹರಣೆ ಬೇಕೇ ಎಂದು ಪ್ರಶ್ನಿಸಿದರು.

ಬಿಜೆಪಿ- ಜೆಡಿಎಸ್ ಬೇರೆ ಅಲ್ಲ. ನಾವೆಲ್ಲ ಒಂದೇ ತಾಯಿ ಮಕ್ಕಳಂತೆ. ಬಿಜೆಪಿ- ಜೆಡಿಎಸ್ ಅಭ್ಯರ್ಥಿ ಯಾರೇ ಇರಲಿ; ಅವರನ್ನು ಗೆಲ್ಲಿಸಲು ಪ್ರಾಮಾಣಿಕವಾಗಿ ಪಣ ತೊಡಿ. ಆಗ ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಗೆಲ್ಲುವ ನಮ್ಮ ಪ್ರಯತ್ನವನ್ನು ತಡೆಯಲು ಯಾರಿಂದಲೂ ಅಸಾಧ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಿಂದ ಕಾಂಗ್ರೆಸ್ ಪಕ್ಷಕ್ಕೆ ನಡುಕ ಬಂದಿದೆ. ನಾವೂ ಎಲ್ಲಿಯೂ ಮೈ ಮರೆಯುವುದು ಬೇಡ. ಸೂರ್ಯಚಂದ್ರರು ಹುಟ್ಟೋದು ಎಷ್ಟು ಸತ್ಯವೋ ಕೇಂದ್ರದಲ್ಲಿ ನರೇಂದ್ರ ಮೋದಿ ಅವರ ಸರ್ಕಾರ ಮತ್ತೆ ಬರುವುದು ಅಷ್ಟೇ ಸತ್ಯ ಎಂದರು.

# ಮಾಜಿ ಶಾಸಕ ರಾಜು ಪಾಲ್ ಹತ್ಯೆ

**(1ನೇ ಪುಟದಿಂದ)** ಅಹಮದ್, ಇಸ್ರಾರ್ ಅಹಮದ್, ಜಾವೇದ್, ಗುಲ್‌ಹಸನ್ ಹಾಗೂ ಅಬ್ದುಲ್ ಕವಿ ದೋಷಿಗಳು ಎಂದು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ.


**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಅಂದನೂರು ಅಡವಿ ಸ್ವಾಮಿ ಮತ್ತು ಸಹೋದರರ ಜ್ಞಾಪಕಾರ್ಥವಾಗಿ
ಜ್ಯೋತಿ ಗ್ಯಾಸ್ ಅಂದನೂರು ಮುರುಗಪ್ಪ ಇವರುಗಳ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ಡುಪ್ಲೆಕ್ಸ್ ಮನೆಗಳು ಮಾರಾಟಕ್ಕಿವೆ**
DC ಮನೆ ಸರ್ಕಲ್ ಹತ್ತಿರ (ಸಪ್ತಗಿರಿ ಕಾಲೇಜ್ ಎದುರು) ಪೂರ್ವ 30x50 (Hifi) ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x45 (Hifi) ಎಸ್.ಎಸ್. 'ಬಿ' ಬ್ಲಾಕ್ ಪೂರ್ವ 30x40 ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x35 (Ground floor)
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿದೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x55 (ಅಕ್ಕ-ಪಕ್ಕ) 40x60 (ಅಕ್ಕ-ಪಕ್ಕ) ಪಶ್ಚಿಮ 30x50, ಬನಶಂಕರಿ ಬಡಾವಣೆ ಪೂರ್ವ 30x50. ಪಿ.ಬಿ. ರೋಡ್ (Sub Register Office) ಹಿಂಭಾಗ ಪೂರ್ವ 30x50.
ಐಗೂರು ವಿಜಯಕುಮಾರ
99457 02495

**ಸೈಟ್ ಮಾರಾಟಕ್ಕೆ (KHB)**
ಕಿರಣ್ ಬೂಸ್ನೂರ್
98440 63409, 97315 63409
ಕರ್ನಾಟಕ ಗೃಹ ಮಂಡಳಿಯಲ್ಲಿ
1) 50x80 ಪಶ್ಚಿಮ 2450 ರೂ. ಅಡಿಗೆ
2) 40x60 ದಕ್ಷಿಣ 2570 ರೂ. ಅಡಿಗೆ
3)40x60 ಪಶ್ಚಿಮ 2625 ರೂ. ಅಡಿಗೆ
ಕಾಲ್ ಮಾಡಿ. ನೇರವಾಗಿ ರಿಜಿಸ್ಟರ್ ಪಾರ್ಟಿ ವ್ಯಾಪಾರ ಅರ್ಧ ಪರ್ಸೆಂಟ್ (1/2 %) ಕಮೀಷನ್‌ಗೆ

**ಸೈಟ್ ಬೇಕಾಗಿದೆ**
ಬೈಪಾಸ್ ಪಕ್ಕ ಹಳೆ ಮತ್ತು ಹೊಸ ಬನಶಂಕರಿ ಬಡಾವಣೆಯಲ್ಲಿ ಬಂಗ್ಲೆ ಸೈಟ್ ಬೇಕು. ಉತ್ತರ, ಪೂರ್ವ (100x100, 80x100, 80x90 ಈ ತರ)
ಕಿರಣ್ ಬೂಸ್ನೂರ್
98440 63409, 97315 63409
ರಿಯಲ್ ಎಸ್ಟೇಟ್ ಏಜೆಂಟರು ಕಾಲ್ ಮಾಡಿ

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 13.05.2024 ರಿಂದ 21.05.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ ಪ್ರವಾಸ ವಿಮಾನದಲ್ಲಿ ಪ್ರಯಾಣ. ಆಸಕ್ತಿ ಇರುವವರು ಕರೆ ಮಾಡಿ :
94485 33928, 90086 26473

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**Site for sale**
In Basavehwara nagara, near Sapthagiri school, opposite to chigateri layout, banni marada chowdamma, 3rd site no 38
East facing size 30x40
Contact direct owner **Prakash hullathi**
97421 26262

**ಕೆಲಸಕ್ಕೆ ಬೇಕಾಗಿದ್ದಾರೆ**
ತರಳಬಾಳು ಬಡಾವಣೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕ್ಲಿನಿಕ್‌ಗೆ
ರಿಸೆಪ್ಷನಿಸ್ಟ್ - 1
(ಬಿ.ಕಾಂ. ಪದವಿ ಅರ್ಹತೆ)
ಫೋನ್ : 86186 42929
08192-252228

**ಸೈಟು ಮಾರಾಟಕ್ಕಿವೆ**
KHB ಲೇಔಟ್‌ನಲ್ಲಿ 50×80 ಪಶ್ಚಿಮ ಹಾಗೂ ಡಾಲರ್ಸ್ ಕಾಲೋನಿಯಲ್ಲಿ (ಎರಡು 30×40 ಸೈಟ್ ಸೇರಿ ಒಟ್ಟು 3060 Sqft ಇರುವ) ಈಶಾನ್ಯ ಬೆಳೆದಿರುವ ದಕ್ಷಿಣ ಪಶ್ಚಿಮ ದಿಕ್ಕಿನ ಕಾರ್ನರ್ ಸೈಟ್ ಮಾರಾಟಕ್ಕಿರುತ್ತದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ನೇರವಾಗಿ ಸೈಟ್ ಓನರ್‌ಗೆ ಸಂಪರ್ಕಿಸಿ.
63621 81509

**ಕೆಲಸಕ್ಕೆ ಬೇಕಾಗಿದ್ದಾರೆ**
ವಯೋವೃದ್ಧ ಪೇಷೆಂಟ್‌ಗಳನ್ನು ನೋಡಿಕೊಳ್ಳಲು ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಆಸಕ್ತರು ಸಂಪರ್ಕಿಸಿ :
63635 85792, 63647 29758

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಸೈಟು ಮಾರಾಟಕ್ಕಿದೆ**
ಸರಸ್ವತಿ ನಗರ 30x50 (ಉತ್ತರ) ಮತ್ತು 30x50 (ದಕ್ಷಿಣ) ಬನಶಂಕರಿ ಬಡಾವಣೆ 40x65 (ಪೂರ್ವ) ಡಾಲರ್ಸ್ ಕಾಲೋನಿ 40x50 (ಉತ್ತರ) ವಿನಾಯಕ ಬಡಾವಣೆ 40x60 (ಉತ್ತರ)
95385 65909

**ಮನೆ ಲೀಸ್ ಗಿದೆ**
ದೇವರಾಜ್ ಅರಸ್ ಬಡಾವಣೆ, ಶಿವ-ಪಾರ್ವತಿ ಕಲ್ಯಾಣ ಮಂಟಪ ಸಮೀಪ 2ನೇ ಮಹಡಿಯಲ್ಲಿ ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ಸೌಕರ್ಯವಿರುವ ಸುಸಜ್ಜಿತ 2BHK ಮನೆ ಲೀಸ್ ಗಿದೆ.
76187 94615

**ಬಾಡಿಗೆ / ಲೀಸ್‌ಗೆ**
ಡಬಲ್ ರೂಮ್‌ನ ಮನೆ ಸಿಗುತ್ತದೆ. ಅಶೋಕ ನಗರ, ಕೊಂಡಜ್ಜಿ ರಸ್ತೆ, ದಾವಣಗೆರೆ. ಸಂಪರ್ಕಿಸಿ :
95356 10817

**NURSING STAFF REQUIRED**
8 Hours Daily,
3 Shifts. Contact :
81238 95187
Minimum 8K Salary

**ಮನೆ ಬಾಡಿಗೆಗೆ/ ಲೀಸ್‌ಗೆ ಬೇಕಾಗಿದೆ**
ಒಂದು ಅಥವಾ ಎರಡು ಬೆಡ್‌ರೂಮ್‌ನ ಮನೆ ಎಂ.ಸಿ.ಸಿ. ಎ ಬ್ಲಾಕ್ ಮತ್ತು ಎಂ.ಸಿ.ಸಿ. ಬಿ ಬ್ಲಾಕ್‌ನಲ್ಲಿ ಹಾಗೂ ಎಸ್.ಎಸ್.ಲೇಔಟ್‌ನಲ್ಲಿ ತಕ್ಷಣ ಬೇಕಾಗಿದೆ.
63609 93735

**ಡ್ರೈವರ್ ಬೇಕಾಗಿದ್ದಾರೆ**
ಆಟೋ ಗೇರ್ ಕಾರನ್ನು ಚಾಲನೆ ಮಾಡುವ ಅನುಭವ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ:
94482 02879

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ ಮತ್ತು ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೋಂ ನರ್ಸಿಂಗ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ. ವಿದ್ಯಾರ್ಹತೆ : 7th, 10th, PUC, ANM, GNM
91486 83185

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**Tele Caller**
(Attractive Salary + incentives)
99645 46667
89700 66666

**Independent Business Opportunity**
Work from Home Earn Supplemental Income. Training and support provided. An opportunity in becoming Your Own Boss
9060320111, 9902203743

**FLAT FOR LEASE ONLY**
2 BHK, 2nd floor,
AM apartment
NAINIKA PRIME ROSE
Vidyanagara Last Bus stop, Davanagere
8123407991, 8310062694

**ಬೇಕಾಗಿದ್ದಾರೆ**
ವಿದ್ಯಾನಗರ 2ನೇ ಬಸ್ ಸ್ಟಾಪ್ ಹತ್ತಿರ, ಮನೆಯ ಗಾರ್ಡನ್ ಕೆಲಸಕ್ಕೆ ಹೆಂಗಸರು ಹಾಗೂ ಕಾರ್ ಡ್ರೈವರ್ ಬೇಕಾಗಿದ್ದಾರೆ.
99162 36521

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್ ಕರೂರು ಇಂಡಸ್ಟ್ರಿಯಲ್ ಏರಿಯಾ ದಾವಣಗೆರೆ. ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ : 13000 ತಿಂಗಳಿಗೆ ಕೊಡುತ್ತೇವೆ.
94829 91495, 99018 69371

**ಬೇಕಾಗಿದ್ದಾರೆ**
ನುರಿತ ಅನುಭವವುಳ್ಳ ಶಿಕ್ಷಕಿಯರು
D.Ed., M.A.B.,Ed/B.Sc.B.Ed/ B.A., B.Ed., M.Sc.,M.Ed., B.Com, NTC
ಆಯಾ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ವೇತನ ಸಂಜೆ 4.30 ರಿಂದ 5.30ರವರೆಗೆ ಟ್ಯೂಷನ್ ಮಾಡಿಕೊಳ್ಳಬಹುದು. ಸ್ವ-ವಿವರವನ್ನು WhatsAppಗೆ ಕಳುಹಿಸಿ.
ಶ್ರೀ ನೀಲಕಂಠೇಶ್ವರ ಪಬ್ಲಿಕ್ ಸ್ಕೂಲ್
B1- ದಾವಣಗೆರೆ, B2-ಹರಿಹರ, B3-ಮಿಟ್ಲಕಟ್ಟೆ.
9741746205, 7349397287

**ಮನೆಗಳು ಲೀಸ್‌ಗಿವೆ**
1BHK, RCC, 1ನೇ ಮಹಡಿ, ನಿಟುವಳ್ಳಿ, ಲೆನಿನ್ ನಗರ, ದಾವಣಗೆರೆ ಲೀಸ್ ಮೊತ್ತ 2 ಲಕ್ಷ, 2BHK RCC 2ನೇ ಮಹಡಿ, ಲೀಸ್ 5.5 ಲಕ್ಷ, 1BHK RCC 1ನೇ ಮಹಡಿ, ದೇವರಾಜ ಅರಸ್ ಬಡಾವಣೆ, ದಾವಣಗೆರೆ. ಲೀಸ್ 5 ಲಕ್ಷ, ಬೋರ್ ವೆಲ್/ಕಾರ್ಪೋರೇಷನ್ ನೀರಿನ ವ್ಯವಸ್ಥೆ ಕಾರ್ ಪಾರ್ಕಿಂಗ್ ಹಾಗೂ ಪೂರ್ವ ಬಾಗಿಲು.
9741746205, 7349397287

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ 30x50, ಪಶ್ಚಿಮ (2400 sqft), ಡಾಲರ್ಸ್ ಕಾಲೋನಿ ಸೈಟ್ 40x51 ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**SHOP FOR RENT**
12'x12',
Mamas Joint Road,
Mishra Peda Building,
MCC B Block, Davangere.
98440 64565

**WANTED TEACHERS**
Kanaka Central School, Anaberu
Kanaka Central School, Davangere
Maths -05 | Social -05
Science-05 | Nursery-10
English -05
Interview Place :
KANAKA CORRESPONDENCE COLLEGE
Kurubara Hostel Complex, DAVANGERE.
Interview Date : 31st March 2024.
Sunday Time : 11.00 AM
9916657971, 9886678178

**ದಾಖಲೆಗಳು ಕಳೆದಿವೆ**
ಚನ್ನಗಿರಿ ಪಟ್ಟಣದ ಬಸ್ ನಿಲ್ದಾಣ ಸಮೀಪ ದಿನಾಂಕ : 8.3.2024 ರಂದು ನನ್ನ ಹೆಸರಿನಲ್ಲಿರುವ ನಿವೇಶನಗಳ ಶುದ್ಧ ಕ್ರಯ ಪತ್ರಗಳು ಕಳೆದಿರುತ್ತವೆ. (ಕಳೆದಿರುವ ಪತ್ರದ ಸಂಖ್ಯೆ : SRO672/85-86) ಈ ಕುರಿತು ಈಗಾಗಲೇ ಚನ್ನಗಿರಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇನೆ. ಪತ್ರಗಳು ಯಾರಿಗಾದರೂ ಸಿಕ್ಕಿದ್ದರೆ ಈ ವಿಳಾಸಕ್ಕೆ ತಿಳಿಸಬೇಕಾಗಿ ವಿನಂತಿ.
ಶಫೀ ಅಹಮದ್ ಬಿನ್ ಅಬ್ದುಲ್ ನಬಿ ಸಾಬ್
# 21, ಮುಖ್ಯರಸ್ತೆ,
ಕಾಸಲ್ ಮಸೀದಿ ಸರ್ಕಲ್, ಚನ್ನಗಿರಿ.
99160 45424

**WANTED TEACHERS**
FOR PRE-SCHOOL
LADY GRADUATES WITH MINIMUM TWO YEARS
Experience In Pre School Teaching, Good In English And Communication Skills.
CALL : 63609 93735

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೋರೇಷನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 2 ಸೈಟು ಪೂರ್ವ, 30x40 ಪೂರ್ವ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ ಶ್ರೀ ಸಾಮಾನ್ಯದಲ್ಲಿ 30x43 40 ಅಡಿ ರಸ್ತೆಗೆ, ಉತ್ತರ 30x40 ಉತ್ತರ ಬೈಪಾಸ್ ಸರ್ವೀಸ್ ರಸ್ತೆಗೆ, 30x55 (ಕಮರ್ಷಿಯಲ್) ಸೈಟ್‌ಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**WANTED / ಬೇಕಾಗಿದ್ದಾರೆ**
SSLC / PUC ಆಗಿರುವ ಮತ್ತು ಕನ್ನಡವನ್ನು Speed / ವೇಗವಾಗಿ type ಮಾಡುವವರು ಬೇಕಾಗಿದ್ದಾರೆ.
96118 66449

**NEED ASSISTANCE**
Store Manager For Royaloak Davangere
6366 430537
98444 93755

**ಬಾಡಿಗೆಗೆ ಇದೆ**
ಚೌಕೀಪೇಟೆಯಲ್ಲಿ 12x150 ಅಳತೆ ಖಾಲಿ ಇರುವ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ :
98458 70911
85531 86185

**ಕೆಲಸಕ್ಕೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗ, ಹುಡುಗಿ. ಸೇಲ್ಸ್‌ಮೆನ್ ಮತ್ತು ಸೇಲ್ಸ್‌ಗರ್ಲ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
93414 58505

**ಶಿಕ್ಷಕಿ/ಶಿಕ್ಷಕರು ಬೇಕಾಗಿದ್ದಾರೆ**
D.Ed.-04, B.Ed./MA English-02, Social-02, BA.B.Ed./MA Kannada-02, B.Sc., B.Ed, PCM-02, CBZ-02, B.Com/BCA-01,
ಸಂಪರ್ಕಿಸಿ : SMS ಕಾನ್ವೆಂಟ್,
ರಾಜೀವ್‌ಗಾಂಧಿ ಬಡಾವಣೆ, RTO ಕಚೇರಿ ಹತ್ತಿರ, ದಾವಣಗೆರೆ.
9844735946, 9663195531

**OT ಟೆಕ್ನಿಷಿಯನ್ ಬೇಕಾಗಿದ್ದಾರೆ**
ಆಸ್ಪತ್ರೆ ಅಪರೇಷನ್ ಥೀಯೇಟರ್ ಕೆಲಸ ಮಾಡಲು ಅನುಭವವುಳ್ಳ OT ಟೆಕ್ನಿಷಿಯನ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು.
99725 23910

**ಬೇಸಿಗೆ ಶಿಬಿರ**
ಶಾಲಾ ಮಕ್ಕಳಿಗಾಗಿ
ಸ್ಪೋಕನ್ ಇಂಗ್ಲಿಷ್, ಕಂಪ್ಯೂಟರ್ ಕ್ಲಾಸಸ್, ನವೋದಯ ಕೋಚಿಂಗ್.
ವಿಕಾಸ್ ಅಕಾಡೆಮಿ, ದಾವಣಗೆರೆ.
93802 29199, 97399 22225

**ಬಾಡಿಗೆಗೆ / ಲೀಸ್‌ಗೆ ಇದೆ**
ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ (ಬ್ರಿಕ್ಸ್) ಬಾಡಿಗೆ ಅಥವಾ ಲೀಸ್‌ಗೆ ಕೊಡಲಾಗುವುದು. ಮಲೇಬೆನ್ನೂರು ರಸ್ತೆ, ಜರಿಕಟ್ಟೆ ದಾವಣಗೆರೆ ತಾ. ಜಿ.
99017 74089

**WANTED**
Office Work - 1,
Sales - 1
Technician Service - 1
THE MOBILE SHOP
ASHOKA & AVK ROAD, DVG.
90608 83886

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೆಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆಯಿಂದ ಕೊಂಡಜ್ಜಿ ಕಡೆ ಹೋಗುವ ಯರಗುಂಟೆಗೆ ಹತ್ತಿರವಿರುವ ಶಿವಪುರದಲ್ಲಿ ಮುಖ್ಯ ರಸ್ತೆಗೆ ಹೊಂದಿಕೊಂಡು ಇರುವ ಜಮೀನಿನಲ್ಲಿ ಹೊಸದಾಗಿ ಆಗಲಿರುವ ಲೇಔಟ್‌ನಲ್ಲಿ ಕೆಲವೇ ಸೈಟುಗಳನ್ನು ಮಾರುವವರಿದ್ದೇವೆ. ಮತ್ತು ಕೊಂಡಜ್ಜಿ ರಸ್ತೆಗೆ ಸುಮಾರು 7000 ಅಡಿ ರೆವಿನ್ಯೂ ಜಾಗ ಮಾರಾಟಕ್ಕೆ ಇದೆ.
ನೇರವಾಗಿ ಸಂಪರ್ಕಿಸಿ.
97424 34049

**SUMMER ENGLISH CAMP**
For School Children
@ Veta Experts
in Spoken English
98450 40493
99028 60360

**ಶ್ರೀ ಮಾತ ಪುರದಮ್ಮ ಜ್ಯೋತಿಷ್ಯಾಲಯ**
ಪ|| ಶ್ರೀರಾಮ್ ಭಟ್
ನಂ. 1 ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ-ಮಂತ್ರ, ವಿ.ಸೂ. ಸ್ತ್ರೀ-ಪುರುಷ ವಶೀಕರಣ ಕೇವಲ 2 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
97315 83591

**WANTED**
FEMALE RECEPTIONIST
20 to 27years, Any degree, Kannada, English, Hindi, 12000 to 15000/-p.m
Timing :12pm to 9pm
Hairpoint unisex salon
MCC B block, near water tank park, Dvg.
97386 64400, 91483 19342

**ಸೋಫಾ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple
Maharaj Pet, Davanagere
98445 81966

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**SPOKEN ENGLISH**
* Grammar & Vocabulary
* Writing Skills
* Pronounciation
* Story Telling
* Public Speaking
Call : 98442 39618

## ಕೇದಾರ ಜಗದ್ಗುರುಗಳು, ಕಣ್ವಕುಪ್ಪೆ ಶ್ರೀಗಳಿಂದ ಪ್ರಭಾಗೆ ಆಶೀರ್ವಾದ





ದಾವಣಗೆರೆ, ಮಾ. 29- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕೇದಾರ ಪೀಠದ ಶ್ರೀ ಭೀಮಾಶಂಕರ ಜಗದ್ಗುರುಗಳು ಹಾಗೂ ಕಣ್ವಕುಪ್ಪೆ ಗವಿಮಠದ ಪೂಜ್ಯರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

## ಸಾಹಿತ್ಯ ಇದ್ದಲ್ಲಿ ಸಹೃದಯತೆ ಎಂಬುದು ಜನಜನಿತ



### ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅಭಿಮತ

ದಾವಣಗೆರೆ, ಮಾ.29- ಸಾಹಿತ್ಯ ಇದ್ದಲ್ಲಿ ಸಹೃದಯತೆ ಇರುತ್ತದೆ ಎನ್ನುವ ಮಾತು ಜನಜನಿತ. ಸಾಹಿತ್ಯದ ಮನಸ್ಸುಗಳು ಏನನ್ನಾದರೂ ಯಶಸ್ವಿಯಾಗಿ ಸಾಧಿಸಬಲ್ಲವು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕ, ಸ್ಫೂರ್ತಿ ಪ್ರಕಾಶನ ತೆಲಿಗಿ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಯುಗಾದಿ ಕವಿಗೋಷ್ಠಿ-ಕ್ರೋಧಿ ನಾಮ ಸಂವತ್ಸರದ ಸ್ವಾಗತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಯಾವುದೇ ಸಾಹಿತ್ಯ ರಚನೆಯಾಗಿರಲಿ ಅದಕ್ಕೆ ಲಿಪಿ ಕೊಟ್ಟರೆ ಅದೆಲ್ಲವೂ ಸಾಹಿತ್ಯ ಆಗಲಿದೆ. ವಿಜ್ಞಾನದ ಕ್ಷೇತ್ರಕ್ಕೆ ಸಂಬಂಧಿಸಿದ ಸಾಹಿತ್ಯ ರಚನೆ ಮಾಡಿದರೆ ವಿಜ್ಞಾನ ಸಾಹಿತ್ಯವಾಗಲಿದೆ. ಮಕ್ಕಳ ಮಾತುಗಳನ್ನು ಸಾಹಿತ್ಯ ಕೃಷಿ ಮಾಡಿದರೆ ಮಕ್ಕಳ ಸಾಹಿತ್ಯವಾಗಲಿದೆ. ಬಂಡಾಯದ ರೂಪದಲ್ಲಿ ರಚಿಸಿದರೆ ಬಂಡಾಯ ಸಾಹಿತ್ಯವಾಗಲಿದೆ, ಚುಟುಕಾಗಿ ರಚನೆ ಮಾಡಿದರೆ ಅದು ಚುಟುಕು ಸಾಹಿತ್ಯವಾಗಲಿದೆ. ಒಟ್ಟಾರೆ ಕನ್ನಡ ಸಾಹಿತ್ಯ ಪರಿಷತ್ ಎಲ್ಲಾ ಸಂಘ-ಸಂಸ್ಥೆಗಳಿಗೆ ಮಾತೃ ಸ್ಥಾನದಲ್ಲಿ ನಿಂತು ಕೆಲಸ ಮಾಡುತ್ತಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಕೇವಲ ನಾಡಿಗೆ ಸೀಮಿತವಾಗದೇ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲೂ ತನ್ನದೇ ಛಾಪು ಮೂಡಿಸಿದೆ. ತನ್ನದೇ ಆದ ಸಂದೇಶಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ. ಯುಗದ ಆದಿಯನ್ನು ನಾವೆಲ್ಲರೂ ಸ್ವಾಗತಿಸೋಣ ಎಂದು ಹೇಳಿದರು.

ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಜಿ.ಹೆಚ್. ರಾಜಶೇಖರ್ ಗುಂಡಗಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕೆ. ಎಸ್. ವೀರಭದ್ರಪ್ಪ ತೆಲಿಗಿ, ರಾಮಚಂದ್ರಪ್ಪ, ಹೆಚ್.ವಿ. ಮಂಜುನಾಥಸ್ವಾಮಿ, ಮಾರುತಿ ಶಾಲಿಮನಿ, ಮಾಗಾನಹಳ್ಳಿ ಎಂ. ಬಸವರಾಜ್, ಸುನೀತ ಪ್ರಕಾಶ್, ಸುಶೀಲ ಬಸವರಾಜ್, ಅಣಬೇರು ಕೆ.ಪಿ. ತಾರೇಶ್, ಉಮಾದೇವಿ ಹಿರೇಮಠ, ಲಲಿತ್ ಕುಮಾರ್ ಜೈನ್, ಪಕ್ಕೀರೇಶ್ ಆದಾಪುರ ಮತ್ತಿತರರು ಭಾಗವಹಿಸಿದ್ದರು.

## ಸುಂಕದಕಟ್ಟೆಯಲ್ಲಿ ಶ್ರೀ ನರಸಿಂಹ ಸ್ವಾಮಿ ದೊಡ್ಡ ರಥೋತ್ಸವ



ಹೊನ್ನಾಳಿ, ಮಾ. 29 - ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದಲ್ಲಿ ನಿನ್ನೆ ಬೆಳಗಿನ ಜಾವ ಶ್ರೀ ನರಸಿಂಹ ಸ್ವಾಮಿ ದೊಡ್ಡ ರಥೋತ್ಸವ ಭಕ್ತರ ಜಯಘೋಷದ ಮಧ್ಯೆ ವಿಜೃಂಭಣೆಯಿಂದ ನೆರವೇರಿತು. ಅಲಂಕೃತ ರಥಕ್ಕೆ ಭಕ್ತರು ಮಂಡಕ್ಕಿ, ಮೆಣಸಿನಕಾಳು, ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು.

ಸಂಜೆ ಓಕುಳಿ ಉತ್ಸವ ನೆರವೇರಿತು. ಯುವಕರು ಒಬ್ಬರಿಗೊಬ್ಬರು ಬಣ್ಣ ಎರಚುತ್ತಾ ಸಂಭ್ರಮಿಸಿದರು. ಬಳಿಕ ಮಣೇವು (ಭೂತನ ಸೇವೆ) ಜರುಗಿತು.

## ಇಂದು ಬಸವನಾಳು ಶ್ರೀ ಬಸವೇಶ್ವರ ರಥೋತ್ಸವ



ದಾವಣಗೆರೆ ತಾಲ್ಲೂಕಿನ ಬಸವನಾಳು ಗ್ರಾಮದಲ್ಲಿ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ಇಂದು ಸಂಜೆ ಜರುಗಲಿದೆ. ನಾಳೆ ಮಧ್ಯಾಹ್ನ ಬೆಲ್ಲದ ಬಂಡಿ ಉತ್ಸವ ಹಾಗೂ ಸಂಜೆ ಓಕುಳಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ರಾತ್ರಿ 10 ಗಂಟೆಗೆ ಶ್ರೀ ನಂಜುಂಡೇಶ್ವರ ನಾಟಕ ಸಂಘ ತುಮಕೂರು ಇವರಿಂದ 'ಕಿವುಡ ಮಾಡಿದ ಕಿತಾಪತಿ' ಸಾಮಾಜಿಕ ನಾಟಕ ಪ್ರದರ್ಶನವಿದೆ.

## ಹರಿಹರ : ಶಿವಸಂಚಾರ ನಾಟಕ

ಹರಿಹರ, ಮಾ. 29- ಸಿಟಿ ಫ್ಯಾಮಿಲಿ ಸೆಂಟರ್ ಮತ್ತು ಸಾಧು ವೀರಶೈವ ಸಮಾಜ (ಹರಿಹರ) ಇವರ ಆಶ್ರಯದಲ್ಲಿ ಬರುವ ಏಪ್ರಿಲ್ 1 ರಿಂದ 3ರವರೆಗೆ ಶಿವಸಂಚಾರ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಏಪ್ರಿಲ್ 1 ರ ಸೋಮವಾರ ಜಯಂತ್ ಕಾಯ್ಕಿಣಿ ರಚನೆಯ ಹುಲುಗಪ್ಪ ಕಟ್ಟಿಮನಿ ನಿರ್ದೇಶನದ 'ಜೊತೆಗಿರುವನು ಚಂದಿರ' ನಾಟಕ, ಏಪ್ರಿಲ್ 2 ರ ಮಂಗಳವಾರ ಕೆ.ಎಸ್. ಸಾಳಂಕಿ ರಚನೆಯ ಮಾಲತೇಶ ಆರ್. ಬಡಿಗೇರ್ ವಿನ್ಯಾಸ ನಿರ್ದೇಶನದ 'ತಾಳಿಯ ತಕರಾರು' ಹಾಗೂ ದಿನಾಂಕ 3ರ ಬುಧವಾರ ಡಾ. ನಟರಾಜ್ ಬೂದಾಳು ರಚನೆಯ ಸಿ. ಬಸವಲಿಂಗಯ್ಯ ನಿರ್ದೇಶನದ 'ಕಲ್ಯಾಣದ ಬಾಗಿಲು' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಹರಿಹರ ವಿದ್ಯಾನಗರದ ಸಿಟಿ ಫ್ಯಾಮಿಲಿ ಸೆಂಟರ್‌ನಲ್ಲಿ ಪ್ರತಿದಿನ ಸಂಜೆ 7.30 ರಿಂದ ನಾಟಕ ಪ್ರದರ್ಶನ ಪ್ರಾರಂಭವಾಗಲಿದ್ದು, ಸಾಣೇಹಳ್ಳಿ ಶಿವಕುಮಾರ ಕಲಾ ಸಂಘದವರು ಅಭಿನಯಿಸಲಿದ್ದಾರೆ.

## ನಗರದಲ್ಲಿ ಕಬ್ಬಡ್ಡಿ ಪ್ರೀಮಿಯರ್ ಲೀಗ್ -24 ಜನಪ್ರಿಯ ಟ್ರೋಫಿ ಉದ್ಘಾಟನೆ



ದಾವಣಗೆರೆ, ಮಾ. 29 - ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಹಾಗೂ ಜನಪ್ರಿಯ ಕ್ರೀಡಾ ಹಾಗೂ ಸಾಂಸ್ಕೃತಿಕ ಸಂಸ್ಥೆ ಇವರ ವತಿಯಿಂದ ನಾಡಿದ್ದು ದಿನಾಂಕ 31ರ ವರೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕಬಡ್ಡಿ ಪ್ರೀಮಿಯರ್ ಲೀಗ್ ಜನಪ್ರಿಯ ಟ್ರೋಫಿ ಪಂದ್ಯಾವಳಿಯನ್ನು ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಶಾಮನೂರು ಸಮರ್ಥ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಮಾರಂಭದ ಮುಖ್ಯ ಅತಿಥಿಗಳಾಗಿ ರಾಜು ರೆಡ್ಡಿ, ಶಿವಗಂಗಾ ಶ್ರೀನಿವಾಸ್, ಹೆಚ್. ನಿಜಗುಣ, ಕುರುಡಿ ಗಿರೀಶ್, ಎಂ. ನಾಗರಾಜ್, ಹಾಗು ಪಂದ್ಯಾವಳಿಯ ಸಂಘಟಕ ಪ್ರಕಾಶ್ ಗೌಡ ಇನ್ನು ಮುಂತಾದವರು ಇದ್ದರು.



## ಲೋಕಸಭಾ ಚುನಾವಣೆ ವಿವಿಧ ಇಲಾಖೆ ಅಧಿಕಾರಿಗಳ ಸಭೆ

ಹರಿಹರ, ಮಾ.29- ಬರುವ ಮೇ 7 ರಂದು ನಡೆಯುವ ಲೋಕಸಭಾ ಚುನಾವಣೆಯನ್ನು ನ್ಯಾಯಸಮ್ಮತವಾಗಿ ನಡೆಸುವುದಕ್ಕೆ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಸಹಾಯಕ ಚುನಾವಣಾ ಅಧಿಕಾರಿ ಭಾವನಾ ಬಸವರಾಜ್ ಮತ್ತು ತಹಶೀಲ್ದಾರ್ ಗುರುಬಸವರಾಜ್ ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳ ಸಭೆಯನ್ನು ಏರ್ಪಡಿಸಿ ಚುನಾವಣೆ ಪೂರ್ವ ತಯಾರಿ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ನಾರನಗೌಡ, ಬಿಇಓ ಹನುಮಂತಪ್ಪ, ಆರೋಗ್ಯ ಇಲಾಖೆಯ ಪ್ರಶಾಂತ್, ಬೆಸ್ಕಾಂ ಇಲಾಖೆಯ ರಮೇಶ್ ನಾಯ್ಕ್, ಸಿಡಿಪಿಓ ಇಲಾಖೆಯ ಪೂರ್ಣಿಮಾ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

## ಶ್ರೀ ಮಾದಾರ ಚನ್ನಯ್ಯ ಸ್ವಾಮಿಗಳ ಆಶೀರ್ವಾದ ಪಡೆದ ಪ್ರಭಾ ಎಸ್ಸೆಸ್ಸೆಂ



ದಾವಣಗೆರೆ, ಮಾ. 29- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷ ಬಿ.ಹೆಚ್ ವೀರಭದ್ರಪ್ಪ, ಪ್ರಧಾನ ಕಾರ್ಯದರ್ಶಿ ಜಿ. ರಾಕೇಶ್, ಸಂಘಟನಾ ಕಾರ್ಯದರ್ಶಿ ಶಿವಮೂರ್ತಿ ಬಿ.ಆರ್, ಯುವ ಮುಖಂಡರಾದ ಸುರೇಶ್ ಬಿ.ಡಿ, ಮಂಜುನಾಥ್ ಬಿ.ಆರ್, ದಾವಣಗೆರೆ ದಕ್ಷಿಣ ವಲಯ ಉಪಾಧ್ಯಕ್ಷರಾದ ತಿಮ್ಮೇಶ್ ನಾಯಕ್, ವಿನಯ್ ಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು.

## ನಗರದಲ್ಲಿಂದು ಎಂ.ಐ.ವಿಂಗ್ಸ್ ವಾರ್ಷಿಕೋತ್ಸವ

ಮಲ್ಟಿಪಲ್ ಇಂಟಲಿಜೆನ್ಸ್ ಪರಿಕಲ್ಪನೆಯ ಎಂ. ಐ. ವಿಂಗ್ಸ್ ಪ್ರಿಸ್ಕೂಲ್‌ನ ವಾರ್ಷಿಕೋತ್ಸವವು ಇಂದು ಸಂಜೆ 6 ಗಂಟೆಗೆ ವನಿತಾ ಸಮಾಜದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಪುಷ್ಪಲತಾ, ಮಕ್ಕಳ ವೈದ್ಯರಾದ ಡಾ. ಛಾಯಾ ಕೆ.ಎ, ಶಾಲೆಯ ಸಂಸ್ಥಾಪಕರಾದ ಶ್ರೀಮತಿ ದೀಪ ಎನ್. ರಾವ್ ಮತ್ತು ನಿರ್ದೇಶಕ ವೆಂಕಟೇಶ್ ಬಿ.ಟಿ. ಆಗಮಿಸಲಿದ್ದಾರೆ.

## ನಗರದಲ್ಲಿ ಇಂದು ಉಚಿತ ತಪಾಸಣೆ

ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗದಲ್ಲಿನ 'ನಿರಾಮಯ' ಪ್ರಕೃತಿ ಚಿಕಿತ್ಸೆ, ಯೋಗ ಕೇಂದ್ರದಲ್ಲಿಂದು ಉಚಿತ ಆರೋಗ್ಯ ತಪಾಸಣೆ ನಡೆಯಲಿದೆ ಎಂದು ಪ್ರಕೃತಿ ಚಿಕಿತ್ಸಾ ವೈದ್ಯೆ ಡಾ.ಭುವನೇಶ್ವರಿ ಎಸ್. ತಿಳಿಸಿದ್ದಾರೆ. ಸಂಪರ್ಕಿಸಿ: 8971576426.

## ನಗರದಲ್ಲಿ ಇಂದು ಕಲರ್ಸ್ ಸಮ್ಮಿಲನ

ಆತ್ಮಿ ಅಸೋಸಿಯೇಷನ್, ಕಲರ್ಸ್ ಕಲ್ಚರಲ್ ಅಕಾಡೆಮಿ ವತಿಯಿಂದ ಇಂದು ಸಂಜೆ 5.30 ರಿಂದ 8.30 ರವರೆಗೆ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ 'ಕಲರ್ಸ್ ಸಮ್ಮಿಲನ-2024' ಹಾಗೂ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀಮತಿ ಜಯ ರಾಘವೇಂದ್ರ ನಲ್ಲೂರು ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮಮತಾ ಮಧು, ಬಿ. ಸೌಮ್ಯ, ಶೋಭಾ ಗೌಡರ್ ಆಗಮಿಸಲಿದ್ದು, ರಾಘವೇಂದ್ರ ಎಸ್. ನಲ್ಲೂರು, ಬಿ. ಪ್ರಸನ್ನ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಬೆಳಿಗ್ಗೆ 8 ರಿಂದ 11 ರವರೆಗೆ ಆರೋಗ್ಯ ಶಿಬಿರ (ಉಚಿತವಾಗಿ 50 ಮಹಿಳೆಯರಿಗೆ ಥೈರಾಯಿಡ್ ತಪಾಸಣೆ ನಡೆಸಲಾಗುವುದು) ಆಯೋಜಿಸಲಾಗಿದೆ. ಮಧ್ಯಾಹ್ನ 3 ರಿಂದ 5.30 ಫ್ಯಾನ್ಸಿ ಡ್ರೆಸ್ ಕಾಂಪಿಟೇಶನ್ ನಡೆಯಲಿದೆ.

## ನಗರದಲ್ಲಿ ಬೇಸಿಗೆ ಶಿಬಿರ

ದಾವಣಗೆರೆ, ಮಾ. 29- ಜಿಲ್ಲಾ ಶಿಶು ಕಲ್ಯಾಣ ಮಂಡಳಿ ವತಿಯಿಂದ ಏ. 1 ರಿಂದ 15 ರವರೆಗೆ ನಗರದ ವನಿತಾ ಸಮಾಜದ ಸಭಾಂಗಣದಲ್ಲಿ ಮಕ್ಕಳ ಬೇಸಿಗೆ ಶಿಬಿರ ಏರ್ಪಡಿಲಾಗಿದೆ. ಕ್ವಿಲ್ಲಿಂಗ್ ಆರ್ಟ್ಸ್, ಮಡಿಕೆಯ ಮೇಲೆ ಪೇಂಟಿಂಗ್, ಸಿಮೆಂಟ್ ಆರ್ಟ್ಸ್, ಫ್ರಿಜ್ ಮ್ಯಾಗ್ನೆಟ್, ಬಟನ್ ಆರ್ಟ್ಸ್, ಕಮ್ಯುನಿಕೇಶನ್ ಸ್ಕಿಲ್ ಗಳನ್ನು ಶಿಬಿರದಲ್ಲಿ ಕಲಿಸಲಾಗುವುದು.ಒಂದು ದಿವಸ ಹೊರ ಸಂಚಾರವನ್ನು ಸಹ ಏರ್ಪಡಿಸಲಾಗಿದೆ. 8 ರಿಂದ 15 ವರ್ಷದೊಳಗಿನ ಮಕ್ಕಳಿಗೆ ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ಜಿಲ್ಲಾ ಶಿಶು ಕಲ್ಯಾಣ ಮಂಡಳಿ ಅಧ್ಯಕ್ಷರಾದ ಉಷಾ ರಂಗನಾಥ್, (9986520989) ಸಂಪರ್ಕಿಸಬಹುದು.

## ನಗರದಲ್ಲಿ ಇಂದು ಮತದಾರರಿಗೆ ಜಾಗೃತಿ, ವಿಶ್ವ ಮಹಿಳಾ ದಿನಾಚರಣೆ

ಗೌತಮ್ ಫೌಂಡೇಶನ್, ಶ್ರೀ ವಿಮೋಚನಾ ಮಹಿಳಾ ಸ್ವಸಹಾಯ ಸಂಘಗಳ ಒಕ್ಕೂಟ ಹಾಗೂ ಶ್ರೀ ದುರ್ಗಾ ಸಹಕಾರ ಸಂಘದ ಸಂಯುಕ್ತಾಶ್ರಯದಲ್ಲಿ ಸಾರ್ವತ್ರಿಕ ಚುನಾವಣೆಯ ಪ್ರಯುಕ್ತ ಇಂದು ಮಧ್ಯಾಹ್ನ 12 ಗಂಟೆಗೆ ರೋಟರಿ ಬಾಲಭವನದಲ್ಲಿ ಮತದಾರರಿಗೆ ಜಾಗೃತಿ ಹಾಗೂ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಫೌಂಡೇಶನ್ ನಿರ್ದೇಶಕ ದುರುಗೇಶ್ ಅಧ್ಯಕ್ಷತೆ ವಹಿಸುವರು. ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ್ ಮ. ಕರೆಣ್ಣವರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಜಿ.ಪಂ. ಸಿಇಓ ಸುರೇಶ ಬಿ. ಇಟ್ನಾಳ್, ಪಾಲಿಕೆ ಎಸ್‌ಜೆಎಸ್‌ಆರ್‌ವೈ ಯೋಜನಾಧಿಕಾರಿ ಸುನಂದಮ್ಮ, ಜಿಲ್ಲಾ ಕಾರ್ಮಿಕ ಅಧಿಕಾರಿ ಇಬ್ರಾಹಿಂ, ಲೀಡ್ ಬ್ಯಾಂಕ್ ವಿಭಾಗೀಯ ಪ್ರಬಂಧಕ ಜೆ.ಸಿ. ಪ್ರಕಾಶ್, ಪಿಎಸ್‌ಐ ಜಯಶೀಲಾ, ಅಮೂಲ್ಯ ಸಾಕ್ಷರತಾ ಕೇಂದ್ರದ ರಾಜು ಪಾಟೀಲ್, ಸಂಘಮಿತ್ರ ಗ್ರಾಮೀಣ ಹಣಕಾಸು ಸಂಸ್ಥೆ ರಮೇಶ್, ವಿಮುಕ್ತಿ ವಿದ್ಯಾಸಂಸ್ಥೆ ಅಧ್ಯಕ್ಷೆ ಅನ್ನಪೂರ್ಣಮ್ಮ, ಸಂಕಲ್ಪ ಸ್ವಯಂ ಸೇವಾ ಸಂಸ್ಥೆಯ ಸುರೇಶ್ ಭಾಗವಹಿಸಲಿದ್ದಾರೆ.

## ಖೇಲೋ ಇಂಡಿಯಾ ಪ್ರತಿಭೆಗಳ ಆಯ್ಕೆ

ದಾವಣಗೆರೆ, ಮಾ. 29 - ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ, ವಿದ್ಯಾನಗರ ಬೆಂಗಳೂರು ಇಲ್ಲಿನ ತರಬೇತಿ ಕೇಂದ್ರಕ್ಕೆ ಅಥ್ಲೆಟಿಕ್ಸ್ ಹಾಗೂ ಈಜು ಕ್ರೀಡೆಗಳಲ್ಲಿ ಪ್ರತಿಭಾನ್ವಿತರಾಗಿರುವ ಹಾಗೂ ಪ್ರತಿಭೆಗಳನ್ನು ಆಯ್ಕೆ ಮಾಡುವ ಸಲುವಾಗಿ ಜಯ ಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ ಕ್ರೀಡಾ ಶಾಲೆ, ವಿದ್ಯಾನಗರ, ಬೆಂಗಳೂರು ಇಲ್ಲಿ ಏಪ್ರಿಲ್ 15, 16 ರಂದು ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

ಆಸಕ್ತ ಅರ್ಹ ಕ್ರೀಡಾಪಟುಗಳು ಆಯ್ಕೆಯಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ದೂ.ಸಂ: 08192-237480 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮೀಬಾಯಿ ತಿಳಿಸಿದ್ದಾರೆ.

## ಪಶು-ಪಕ್ಷಿಗಳ ನೀರಿನ ದಾಹ ನಿವಾರಣೆಗೆ ಕರುಣಾದಿಂದ ಬಾನಿಗಳ ವ್ಯವಸ್ಥೆ



ದಾವಣಗೆರೆ, ಮಾ.29- ಬೇಸಿಗೆ ದಿನಗಳಲ್ಲಿ ಪಶು ಪಕ್ಷಿಗಳಿಗೆ ಕುಡಿಯಲು ನೀರಿನ ಸಮಸ್ಯೆ ತಲೆದೋರುತ್ತದೆ. ಅದಕ್ಕಾಗಿ ಮೂಕ ಪ್ರಾಣಿ - ಪಕ್ಷಿಗಳಿಗೆ ನೀರುಣಿಸುವ ಉದ್ದೇಶದಿಂದ ನಗರದ ಕರುಣಾ ಟ್ರಸ್ಟಿನ ವತಿಯಿಂದ ಇಂದು ಸರಸ್ವತಿ ನಗರ, ಎಂ.ಸಿ.ಸಿ 'ಬಿ' ಬ್ಲಾಕ್, ಎನ್. ಆರ್. ರಸ್ತೆ, ಶಿವಕುಮಾರ ಸ್ವಾಮಿ ಬಡಾವಣೆ, ಕೆ.ಇ.ಬಿ ಸರ್ಕಲ್ ಮುಂತಾದೆಡೆಯಲ್ಲಿ 20 ಕುಡಿಯುವ ನೀರಿನ ತೊಟ್ಟಿಗಳನ್ನು ಇಡುವ ವ್ಯವಸ್ಥೆ ಮಾಡಲಾಗಿದೆ.

ಪಶು ಪಕ್ಷಿಗಳ ನೀರಿನ ದಾಹ ತೀರಿಸಲು ಇಚ್ಚಿಸುವವರು ನಮ್ಮನ್ನು ಸಂಪರ್ಕಿಸಿ ಬಾನಿಗಳನ್ನು ಪಡೆಯಬಹುದು.

ಈ ಕಾರ್ಯಕ್ರಮಕ್ಕೆ ಉದಾರ ಹೃದಯದಿಂದ ಉಳ್ಳವರು ಧನಸಹಾಯ ಮಾಡಲು ವಿನಂತಿ. ಅವರ ಹೆಸರುಗಳನ್ನು ಬಾನಿಗಳ ಮೇಲೆ ಬರೆಸಲಾಗುವುದು. ಸಂಪರ್ಕಿಸಿ: 9538024422.

## ನಗರದಲ್ಲಿ ಇಂದು ತಾಲ್ಲೂಕು ಕಸಾಪದಿಂದ ದತ್ತಿ ಉಪನ್ಯಾಸ ಕಾರ್ಯಕ್ರಮಗಳು

**ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ:** ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದಲ್ಲಿ ಶನಿವಾರ ಬೆಳಗ್ಗೆ 10.30 ಕ್ಕೆ ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ನಿರ್ದೇಶಕ ವೈ. ವೃಷಭೇಂದ್ರಪ್ಪ ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಚಾರ್ಯ ಡಾ.ಎ.ಜೆ. ನೀತು ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಅವರು 'ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಸುಮತಿ ಜಯಪ್ಪ, ಎಂ. ಷಡಕ್ಷರಪ್ಪ, ರೇಖಾ ಓಂಕಾರಪ್ಪ, ಪರಿಮಳ ಜಗದೀಶ್, ಮಮತಾ ರುದ್ರಮುನಿ, ಹಿರಿಯ ನಾಗರಿಕ ಸಹಾಯವಾಣಿ ಸಂಯೋಜಕ ನವೀನ್ ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಶ್ರೀಮತಿ ರಾಜೇಶ್ವರಿ ಜಯಣ್ಣ ದತ್ತಿಯನ್ನು ; ದತ್ತಿ ದಾನಿಗಳಾದ ಎ.ಸಿ. ಜಯಣ್ಣ ಸಂದೀಪ, ಹಿರೇಕೋಗಲೂರು ಶ್ರೀಮತಿ ಪಾರ್ವತಮ್ಮ ಹಾದಿಮನೆ ವೀರಭದ್ರಪ್ಪ ದತ್ತಿಯನ್ನು ; ದತ್ತಿ ದಾನಿಗಳಾದ ಡಾ.ಎಚ್.ವಿ ವಾಮದೇವಪ್ಪ, 7ನೇ ಸಾಹಿತ್ಯ ಸಮ್ಮೇಳನ ಹದಡಿ ಸವಿನೆನಪಿನ ದತ್ತಿಯನ್ನು ; ದತ್ತಿ ದಾನಿಗಳಾದ ಬಿ.ವಾಮದೇವಪ್ಪ ಅವರು ನಡೆಸಿ ಕೊಡುವರು.

**ಬಿಇಎ ಪ್ರೌಢಶಾಲೆ** : ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಬಾಪೂಜಿ ಪ್ರೌಢ ಶಾಲೆ (ಸಿಬಿಎಸ್‌ಇ) ಇವರ ಸಹಯೋಗದಲ್ಲಿ ಶನಿವಾರ ಮಧ್ಯಾಹ್ನ 12ಕ್ಕೆ ನಗರದ ಬಿ.ಇ.ಎ. ಹೈಯರ್ ಪ್ರೈಮರಿ ಸಿಬಿಎಸ್‌ಇ ಶಾಲಾ ಆವರಣದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಒಲಂಪಿಯಾಡ್ ಕಾರ್ಯಕ್ರಮದ ನಿರ್ದೇಶಕ ಜೆ. ಪದ್ಮನಾಭ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಲೆಯ ಪ್ರಾಚಾರ್ಯ ಎಚ್.ಎಸ್.ಸತೀಶ್ ಅಧ್ಯಕ್ಷತೆ ವಹಿಸಲಿದ್ದಾರೆ. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ದಾಗಿನಕಟ್ಟೆ ಪರಮೇಶ್ವರಪ್ಪ ಅವರು "ನವೋದಯ ಸಾಹಿತ್ಯಕ್ಕೆ ಕುವೆಂಪು ಅವರ ಕೊಡುಗೆಗಳು" ಎಂಬ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ಷಡಕ್ಷರಪ್ಪ ಎಂ. ಬೇತೂರು, ರೇಖಾ ಓಂಕಾರಪ್ಪ, ಪರಿಮಳ ಜಗದೀಶ್, ಮಮತಾ ರುದ್ರಮುನಿ, ಹಿರಿಯ ನಾಗರಿಕ ಸಹಾಯವಾಣಿ ಸಂಯೋಜಕ ನವೀನ್ ಕುಮಾರ್, ಕೆ.ಜಿ. ಪುಷ್ಪಾ, ಜೆ.ಎಂ. ಅವಿನಾ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಶ್ರೀಮತಿ ವಿ.ಆರ್. ಕಮಲಾಕ್ಷಿ ಮತ್ತು ವಿಠಲಪುರದ ರುದ್ರಪ್ಪ ಅವರ ಗೌರವಾರ್ಥ ದತ್ತಿಯನ್ನು ದತ್ತಿ ದಾನಿಗಳಾದ ಸೀಮಾಕಿರಣ್ ಮತ್ತು ವಿ. ಆರ್. ಕಿರಣ್, ಶ್ರೀಮತಿ ದಾಕ್ಷಾಯಣಮ್ಮ ಮತ್ತು ಡಾ. ಕೆ.ಜಿ. ಬಸವರಾಜಪ್ಪ ಗೌರವಾರ್ಥ ದತ್ತಿಯನ್ನು ದತ್ತಿ ದಾನಿಗಳಾದ ಸಂಗಮೇಶ್ವರ ಗೌಡ, 8ನೇ ಕನ್ನಡ ಸಾಹಿತ್ಯ ಸಮ್ಮೇಳನ ಆನಗೋಡು ಸವಿನೆನಪಿನ ದತ್ತಿಯನ್ನು ದತ್ತಿ ದಾನಿಗಳಾದ ಬಿ. ವಾಮದೇವಪ್ಪ ಅವರು ನಡೆಸಿ ಕೊಡುವರು.

## ಚುನಾವಣೆ : ಬಿಜೆಪಿ ಅಭ್ಯರ್ಥಿ ಆಯ್ಕೆಗೆ ವಿರೋಧ ಮುಂದುವರೆಸಿದ 2008ರ ಪಾಲಿಕೆ ಬಿಜೆಪಿ ಸದಸ್ಯರು



ದಾವಣಗೆರೆ, ಮಾ.29- ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ವಿರುದ್ಧ ಅಸಮಾಧಾನಗೊಂಡಿದ್ದವರಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ನೇತೃತ್ವದ ತಂಡ ಸಮಾಧಾನಗೊಂಡಿದ್ದರೆ, ಮತ್ತೊಂದು ಗುಂಪಿನ ವಿರೋಧ ಇನ್ನೂ ಮುಂದುವರೆದಿದೆ.

ಮಹಾನಗರ ಪಾಲಿಕೆಯ 2008ರ ಅವಧಿಯಲ್ಲಿನ ಬಿಜೆಪಿಯ 22 ಸದಸ್ಯರ ಕೂಟ ಸಂಸದರ ನಡೆಯ ಬಗ್ಗೆ ತಮ್ಮ ಅಸಮಾಧಾನ ಮುಂದುವರೆಸಿದ್ದು, ಇಂದು ಹೋಟೆಲ್ಲೊಂದರಲ್ಲಿ ಸಭೆ ನಡೆಸಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ನಗರಕ್ಕಾಗಮಿಸಿ, ರವೀಂದ್ರನಾಥ್ ಮತ್ತು ಅವರ ತಂಡದವರೊಂದಿಗೆ ಚರ್ಚಿಸಿ ವಿರೋಧವನ್ನು ಶಮನಗೊಳಿಸುವ ಪ್ರಯುಕ್ತ ನಡೆಸಿದ್ದನ್ನು ಸಭೆಯಲ್ಲಿ ಪ್ರಸ್ತಾಪಿಸಿದ 2008ರ ಪಾಲಿಕೆಯ ಬಿಜೆಪಿ ಸದಸ್ಯರು, ತಮ್ಮ ಮುಂದಿನ ನಡೆಯ ಬಗ್ಗೆ ಶೀಘ್ರದಲ್ಲೇ ಮತ್ತೊಂದು ಸಭೆ ನಡೆಸಿ ತೀರ್ಮಾನ ಕೈಗೊಳ್ಳಲು ನಿರ್ಧರಿಸಿದ್ದಾರೆ.

ಹೆಚ್.ಎನ್. ಶಿವಕುಮಾರ್, ಸಂಕೋಳ್ ಚಂದ್ರಶೇಖರ್, ಆವರಗೆರೆ ಸುರೇಶ್, ಎಂ.ಪಿ. ಕೃಷ್ಣಮೂರ್ತಿ ಪವಾರ್, ಹೆಚ್.ಎಂ. ರುದ್ರಮುನಿ ಸ್ವಾಮಿ, ಹೆಚ್.ಎನ್. ಗುರುನಾಥ್, ಎ.ವೈ. ಪ್ರಕಾಶ್, ಕೆ.ಆರ್. ವಸಂತ ಕುಮಾರ್, ಕಾಟೆ, ಸಿದ್ದೇಶ್, ಶಿವರಾಜ್ ಪಾಟೀಲ್ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

Samyak
ಸಮ್ಯಕ್ ಸೆರಾಮಿಕ್ಸ್ ಇಂಟೀರಿಯರ್ ಮಾಲ್
ಸಮ್ಯಕ್ ಗ್ರಾನೈಟ್ಸ್
ಸಮ್ಯಕ್ ಪ್ಲೈ ಅಂಡ್ ಹಾರ್ಡ್‌ವೇರ್
ಹದಡಿ ಮುಖ್ಯ ರಸ್ತೆ, ದಾವಣಗೆರೆ.
ನಮ್ಮ ಅಂಗಡಿಗಳಿಗೆ ಇಂದು – ನಾಳೆ ರಜೆ
ಆತ್ಮೀಯ ಗ್ರಾಹಕರೇ,
ನಮ್ಮ ಅಂಗಡಿಯ ಹಣಕಾಸು ವರ್ಷದ ಅಂತ್ಯದ ಕೆಲಸಗಳಿರುವ ಪ್ರಯುಕ್ತ
ದಿನಾಂಕ 30-03-2024ರ ಶನಿವಾರ ಮತ್ತು
ದಿನಾಂಕ 31-03-2024ರ ಭಾನುವಾರದಂದು
ನಮ್ಮ ಅಂಗಡಿಗಳಿಗೆ ರಜೆ ಇರುತ್ತದೆ. ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.
ಮೊಬೈಲ್ : 80884 80339

# ಸಮೋಸಾದಿಂದ ಚಿಕನ್‌ವರೆಗೆ ಚುನಾವಣಾ ಸಮಿತಿಗಳಿಂದ ಬೆಲೆ ನಿಗದಿ

ನವದೆಹಲಿ, ಮಾ. 29 - ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳು ಮಾಡಬಹುದಾದ ವೆಚ್ಚಕ್ಕೆ ಮಿತಿ ಇದ್ದು, ಆಹಾರ ವಸ್ತುಗಳ ಬೆಲೆಗಳನ್ನು ಚುನಾವಣಾ ಅಧಿಕಾರಿಗಳು ನಿಗದಿ ಪಡಿಸಿದ್ದಾರೆ. ಆದರೆ, ಚಹಾದಿಂದ ಹಿಡಿದು ಚಿಕನ್‌ವರೆಗೆ ನಿಗದಿ ಪಡಿಸಲಾಗಿರುವ ಕೆಲ ಅಸಹಜ ಬೆಲೆಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್‌ಗೂ ಕಾರಣವಾಗಿವೆ.

ಪಂಜಾಬ್‌ನ ಜಲಂಧರ್ ಅಭ್ಯರ್ಥಿಗಳು ಚಹಾ ಒಂದಕ್ಕೆ ಮಾಡುವ ವೆಚ್ಚವನ್ನು 15 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಮತ್ತೊಂದೆಡೆ ಮಧ್ಯ ಪ್ರದೇಶದ ಮಾಂಡ್ಲಾದಲ್ಲಿ ಒಂದು ಲೋಟ ಚಹಾ ವೆಚ್ಚ 7 ರೂ. ಎಂದು ನಿಗದಿಪಡಿಸಲಾಗಿದೆ.

18ನೇ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ, ಜಿಲ್ಲಾ ಚುನಾವಣಾ ಸಮಿತಿಗಳು ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಆಹಾರ ವಸ್ತುಗಳ ಬೆಲೆಗಳನ್ನು ನಿಗದಿ ಪಡಿಸಿವೆ. ಅಭ್ಯರ್ಥಿಗಳ ಚುನಾವಣಾ ವೆಚ್ಚ ಕಾಯ್ದೆಯ ಮಿತಿಯಲ್ಲಿರಬೇಕಿದೆ. ಈ ಹಿನ್ನೆಲೆಯಲ್ಲಿ ಆಹಾರ ವಸ್ತುಗಳ ಬೆಲೆ ನಿಗದಿ ಪ್ರಾಮುಖ್ಯತೆ ಪಡೆದುಕೊಂಡಿದೆ.

ಆಂಧ್ರ ಪ್ರದೇಶ ಸೇರಿದಂತೆ ಬಹುತೇಕ ಕ್ಷೇತ್ರಗಳಲ್ಲಿ ವೆಚ್ಚದ ಮಿತಿ 95 ಲಕ್ಷ ರೂ. ಆಗಿದೆ. ಆದರೆ, ಅರುಣಾಚಲ ಪ್ರದೇಶ, ಗೋವಾ ಹಾಗೂ ಸಿಕ್ಕಿಂಗಳಲ್ಲಿ ವೆಚ್ಚದ ಮಿತಿ 75 ಲಕ್ಷ ರೂ. ಆಗಿದೆ. ಕೇಂದ್ರಾಡಳಿತ ಪ್ರದೇಶಗಳಲ್ಲಿ ವೆಚ್ಚದ ಮಿತಿ 75 ರಿಂದ 95 ಲಕ್ಷ ರೂ. ಆಗಿದೆ.

ಜಲಂಧರ್‌ನಲ್ಲಿ ಛೋಲೆ ಭಟೂರೆಗೆ 40 ರೂ. ನಿಗದಿ ಪಡಿಸಲಾಗಿದೆ.



ಮಟನ್ ಬೆಲೆ ಕೆ.ಜಿ.ಗೆ 250 ಹಾಗೂ ಚಿಕನ್ ಬೆಲೆ 500 ರೂ. ಎಂದು ನಿಗದಿ ಪಡಿಸಲಾಗಿದೆ. ಲಸ್ಸಿ ಬೆಲೆ ಲೋಟಕ್ಕೆ 20 ರೂ. ಹಾಗೂ ನಿಂಬೆ ರಸದ ಬೆಲೆ 15 ರೂ. ಎಂದು ನಿರ್ಧರಿಸಲಾಗಿದೆ.

ಮಧ್ಯ ಪ್ರದೇಶದ ಬಾಲಘಾಟ್‌ನಲ್ಲಿ ಚಹಾ ಬೆಲೆ 5 ರೂ. ಹಾಗೂ ಸಮೋಸ ಬೆಲೆ 10 ರೂ. ಎಂದು ನಿಗದಿ ಪಡಿಸಲಾಗಿದೆ. ಈ ಕ್ಷೇತ್ರದಲ್ಲಿ ಇಡ್ಲಿ ಬೆಲೆ 20 ರೂ. ಹಾಗೂ ದೋಸೆ ಬೆಲೆ 30 ರೂ.ಗಳಿಗೆ ನಿಗದಿಯಾಗಿದೆ.

ಮಣಿಪುರದಲ್ಲಿ ಚಹಾ, ಸಮೋಸ ಹಾಗೂ ಕಚೋರಿಗಳ ಬೆಲೆಗಳೆಲ್ಲವನ್ನೂ 10 ರೂ.ಗೆ ನಿಗದಿ ಪಡಿಸಲಾಗಿದೆ. ಮಣಿಪುರದ ಟೆಂಗ್ನೌಪಾಲ್ ಜಿಲ್ಲೆಯಲ್ಲಿ ಕಪ್ಪು ಟೀಗೆ 5 ರೂ. ಹಾಗೂ ಹಾಲಿರುವ ಟೀಗೆ 10 ರೂ. ಬೆಲೆ ನಿಗದಿ ಪಡಿಸಲಾಗಿದೆ. ಬಾತುಕೋಳಿ ಮಾಂಸದ ಬೆಲೆ 300 ಹಾಗೂ ಹಂದಿ ಮಾಂಸದ ಬೆಲೆ 400 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ಚೆನ್ನೈನಲ್ಲಿ ಟೀ ಬೆಲೆ 15 ರೂ. ಹಾಗೂ ಕಾಫಿ ಬೆಲೆ 20 ರೂ. ಎಂದು ನಿಗದಿ ಪಡಿಸಲಾಗಿದೆ. ಚಿಕನ್ ಬಿರಿಯಾನಿ ಬೆಲೆ 150 ರೂ.ಗಳಿಗೆ ನಿಗದಿ ಪಡಿಸಲಾಗಿದೆ. ಆಸಕ್ತಿಕರ ಅಂಶ ಎಂದರೆ 2019ರ ಚುನಾವಣೆಯಲ್ಲಿ ಚಿಕನ್ ಬಿರಿಯಾನಿ ಬೆಲೆ 180 ರೂ. ಎಂದು ನಿಗದಿ ಪಡಿಸಲಾಗಿತ್ತು.

ಗೌತಮ್ ಬುದ್ಧ ನಗರ ಕ್ಷೇತ್ರದಲ್ಲಿ ಸಸ್ಯಹಾರ ಊಟದ ಬೆಲೆ 100 ರೂ., ಚಹಾ ಬೆಲೆ 10 ರೂ., ಕಚೋರಿ ಬೆಲೆ 15 ರೂ., ಸ್ಯಾಂಡ್‌ವಿಚ್ ಬೆಲೆ 25 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ಉತ್ತರ ಗೋವಾದಲ್ಲಿ ಸಮೋಸಾ ಬೆಲೆ 15 ರೂ. ಹಾಗೂ ಚಹಾ ಬೆಲೆ 15 ರೂ. ಹಾಗೂ ಕಾಫಿ ಬೆಲೆ 20 ರೂ.ಗಳಿಗೆ ನಿಗದಿ ಪಡಿಸಲಾಗಿದೆ.

ಪಕ್ಷಗಳು ಹಾಗೂ ಅಭ್ಯರ್ಥಿಗಳು ಕೆಲವೊಮ್ಮೆ ತಮ್ಮ ಕಾರ್ಯಕರ್ತರು ಹಾಗೂ ಮತದಾರರಿಗೆ ಮದ್ಯವನ್ನು ಪೂರೈಸುವುದು ಕಂಡು ಬಂದಿದೆ. ಆದರೆ, ಯಾವುದೇ ದರ ಪಟ್ಟಿಯಲ್ಲಿ ಮದ್ಯವನ್ನು ಉಲ್ಲೇಖಿಸಿಲ್ಲ.

ಹೆಲಿಪ್ಯಾಡ್, ಐಷಾರಾಮಿ ವಾಹನ ಹಾಗೂ ತೋಟದ ಮನೆಯಂತಹ ದುಬಾರಿ ವೆಚ್ಚಗಳಿಂದ ಹಿಡಿದು ಹೂವು, ಕೂಲರ್, ಸೋಫಾ ರೀತಿಯ ವಸ್ತುಗಳ ಬಳಕೆ ಬೆಲೆಯನ್ನೂ ನಿಗದಿ ಪಡಿಸಲಾಗಿದೆ. ಸಮಾವೇಶದ ಸ್ಥಳಗಳಿಗೆ ಜನರನ್ನು ಕರೆ ತರಲು ಬಳಸಲಾಗುವ ವಾಹನಗಳಿಗೂ ಬೆಲೆ ನಿಗದಿ ಪಡಿಸಲಾಗಿದೆ. ಸಮಾರಂಭಗಳಲ್ಲಿ ಬಳಸುವ ಹೂವಿನ ಹಾರಗಳಿಗೂ ಬೆಲೆ ನಿಗದಿಯಾಗಿದೆ.

## ಜಾತ್ರೆ : ಇಂದು ಸಾಂಸ್ಕೃತಿಕ ಕಾರ್ಯಕ್ರಮ



ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಪ್ರಯುಕ್ತ ದೇವಸ್ಥಾನದ ಮುಂಭಾಗದಲ್ಲಿ ಇಂದಿನಿಂದ ಬರುವ ಏಪ್ರಿಲ್ 5ರವರೆಗೆ ಪ್ರತಿದಿನ ರಾತ್ರಿ 8 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯ ಲಿವೆ. ನಾಡಿನ ವಿವಿಧ ಭಾಗಗಳ ಪ್ರಸಿದ್ಧ ಕಲಾವಿದರ ತಂಡ ಈ ಕಾರ್ಯಕ್ರಮವನ್ನು ನಡೆಸಿಕೊಡಲಿದೆ.

## ಬಿಹಾರದಲ್ಲಿ ಮಹಾಘಟಬಂಧನದ ಸೀಟು ಹಂಚಿಕೆ ಪೂರ್ಣ

ಪಾಟ್ನಾ, ಮಾ. 29 – ಆರ್.ಜೆ.ಡಿ. ನೇತೃತ್ವದ ಮಹಾಘಟಬಂಧನ ಬಿಹಾರದಲ್ಲಿ ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ಪೂರ್ಣಗೊಳಿಸಿದೆ. ಅದರಂತೆ, ರಾಜ್ಯದ 40 ಸ್ಥಾನಗಳ ಪೈಕಿ ಆರ್.ಜೆ.ಡಿ. 26ರಲ್ಲಿ ಸ್ಪರ್ಧಿಸಲಿದೆ. ಕಾಂಗ್ರೆಸ್ ಒಂಭತ್ತು ಸ್ಥಾನಗಳಲ್ಲಿ ಸ್ಪರ್ಧಿಸಲಿದೆ. ಸಿಪಿಐ (ಎಂ.ಎಲ್.) ಮೂರು, ಸಿಪಿಐ ಹಾಗೂ ಸಿಪಿಐ (ಎಂ) ಪಕ್ಷಗಳು ತಲಾ ಒಂದು ಸ್ಥಾನಗಳಲ್ಲಿ ಸ್ಪರ್ಧಿಸಲಿವೆ.

## ಭೂಗತ ಅನ್ಸಾರಿ ಸಾವಿನ ತನಿಖೆಗೆ ಆದೇಶ

ಲಖ್ನೌ, ಮಾ. 29 – ಭೂಗತ ಮುಕ್ತಾರ್ ಅನ್ಸಾರಿ ಸಾವಿಗೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಪ್ರಶ್ನೆಗಳನ್ನು ಕೇಳಿವೆ. ಈ ಹಿನ್ನೆಲೆಯಲ್ಲಿ ಸಾವಿನ ನ್ಯಾಯಿಕ ತನಿಖೆಗೆ ಆದೇಶಿಸಲಾಗಿದೆ.

ನಿಧಾನ ವಿಷ ನೀಡುವ ಮೂಲಕ ಸಾವು ಸಂಭವಿಸಿದೆ ಎಂದು ಅನ್ಸಾರಿ ಕುಟುಂಬದವರು ಆರೋಪಿಸಿದ್ದರು. ಈ ನಡುವೆ, ಬಂಡ ಎಂಬಲ್ಲಿನ ವೈದ್ಯಕೀಯ ಕಾಲೇಜಿನಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಉತ್ತರ ಪ್ರದೇಶದ ಹಲವು ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಅನ್ಸಾರಿ ವಿರುದ್ಧ 60ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳಿದ್ದವು. ಬಿಜೆಪಿ ಶಾಸಕ ಕೃಷ್ಣಾನಂದ ರಾಯ್ ಹತ್ಯೆ ಪ್ರಕರಣ ಸಹ ಇದರಲ್ಲಿ ಸೇರಿದೆ.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತ ರಣಾ ಕಾರ್ಯಕ್ರಮಕ್ಕೆ ವೃಷಭ ಮೆಡಿಕಲ್ಸ್‌ನ ಪದ್ಮ ಅವರು ಇಂದಿನ ದಾನಿಗಳಾಗಿದ್ದಾರೆ.

ಈ ಸತ್ಕಾ ರ್ಯಕ್ಕೆ ದಾನ ಮಾಡ ಬಯಸುವವರು ಟ್ರಸ್ಟ್ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವ ಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

# ಹೆಣ್ಣು ಪ್ರಜಾಪ್ರಭುತ್ವ ಸಮಾಜದ ಕಣ್ಣು

## ಹರಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ವಿಶ್ಲೇಷಣೆ



ಹರಪನಹಳ್ಳಿ, ಮಾ. 29 - ಹೆಣ್ಣು ಸಮಾಜದ ಕಣ್ಣು, ಸಮಾಜದಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯ. ಆದ್ದರಿಂದ ಸಮಾಜದಲ್ಲಿ ಹೆಣ್ಣು ಕೂಡ ಪುರುಷರಷ್ಟೇ ಸಮಾನಳು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಎಂ. ಭಾರತಿ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ರುವ ತಾಲ್ಲೂಕು ವಕೀಲರ ಸಂಘದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್, ಬಸವಣ್ಣ, ಸಾವಿತ್ರಿಬಾಯಿ ಬಾಫುಲೆರವರ ಭಾವ ಚಿತ್ರಕ್ಕೆ ಪುಷ್ಪನಮನ ಅರ್ಪಿಸಿ ಬಳಿಕ ಮಾತನಾಡಿದ ಅವರು, ಮಹಿಳಾ ದಿನಾಚರಣೆಯನ್ನು ಸುಸ್ಥಿರ ನಾಳೆಗಾಗಿ ಸಮಾನತೆ ಎನ್ನುವ ಧ್ಯೇಯವಾಕ್ಯ ದೊಂದಿಗೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಹಿಂದಿನ ಕಾಲದಲ್ಲಿ ಬೆರಳಣಿಕೆಯಷ್ಟು ಮಹಿಳೆಯರು ಮಾತ್ರ ಮನೆಯಿಂದ ಹೊರಬಂದು ದುಡಿಯುತ್ತಿದ್ದರು, ಆದರೆ ಪ್ರಸ್ತುತ ಗಡಿ ಕಾಯುವುದರಿಂದ ಹಿಡಿದು ಕುಟುಂಬದ ಪ್ರತಿಯೊಂದು ಕೆಲಸವನ್ನೂ ಅತ್ಯಂತ ಸಮರ್ಥವಾಗಿ ನಿರ್ವಹಿಸುವ ಶಕ್ತಿ, ತಾಳ್ಮೆ, ಉತ್ಸಾಹ, ಮಹಿಳೆಗಿದೆ. ಆದರೆ ಇದರ ಮಧ್ಯೆಯೂ ಕೌಟುಂಬಿಕ ದೌರ್ಜನ್ಯಕ್ಕೆ ಹಲವು ಮಂದಿ ಮಹಿಳೆಯರು ಬಲಿಯಾಗುತ್ತಿದ್ದು, ಅವರಿಗೆ ಧೈರ್ಯ ನೀಡಿ ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದರು.

ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಮಾತನಾಡಿ, ಹೆಣ್ಣು ಬದುಕಿನ ಎಲ್ಲಾ ಸವಾಲುಗಳನ್ನು ಎದುರಿಸಿ ನಿಲ್ಲುವ ಗಟ್ಟಿಗಿತ್ತಿ ಯಾಗಿದ್ದಾಳೆ. ಕಷ್ಟದ ದಿನಗಳನ್ನು ಎದುರಿಸಿ ನಿಂತ ಮಹಿಳೆಯ ಸ್ಥೈರ್ಯದ ವಿವರಣೆಗೆ ಬೇರೆ ಪದಗಳು ಬೇಕಿಲ್ಲ ಎಂದು ತಮ್ಮ ವಿದ್ಯಾರ್ಥಿ ಜೀವನದ ಬಗ್ಗೆ ಮತ್ತು ವೃತ್ತಿ ಜೀವನದ ಬಗ್ಗೆ ಶ್ಲಾಘಿಸಿದರು.

ಹೆಣ್ಣು ಮಗಳಾಗಿ, ಪತ್ನಿಯಾಗಿ, ತಾಯಿಯಾಗಿ, ಸ್ನೇಹಿತೆಯಾಗಿ ಎಲ್ಲಾ ಪಾತ್ರಗಳನ್ನು ತುಂಬುವ ಮಹಿಳೆಯ ಸಾಮರ್ಥ್ಯ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯವನ್ನು ಗೌರವಿಸುವ ಮತ್ತು ಅವಳನ್ನು ಗೌರವಯುತವಾಗಿ ನಡೆಸಿಕೊಳ್ಳುವುದು ನಾಗರಿಕ ಸಮಾಜದ ಮುಖ್ಯ ಗುಣವಾಗಬೇಕು. ಮಹಿಳೆಯರು ಸಂವಿಧಾನ ನೀಡಿರುವ ಹಕ್ಕುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ್, ಉಪಾಧ್ಯಕ್ಷ ಸಿ. ಪೀರ್ ಅಹಮ್ಮದ್ , ಕಾರ್ಯದರ್ಶಿ ಜಿ.ಎಸ್.ಎಂ. ಕೊಟ್ರಯ್ಯ, ಸರ್ಕಾರಿ ಅಭಿಯೋಜಕಿಯರಾದ ಮೀನಾಕ್ಷಿ, ಎನ್. ಡಿ. ನಿರ್ಮಲ ಮತ್ತು ಹಿರಿಯ ಮತ್ತು ಕಿರಿಯ ನ್ಯಾಯವಾದಿಗಳು ಹಾಗೂ ಉಭಯ ನ್ಯಾಯಾಲಯದ ಸಿಬ್ಬಂದಿಗಳು ಇದ್ದರು.

## ದಿ|| ಪ್ರೊ|| ಎಸ್.ಹೆಚ್. ಪಟೇಲ್ ಅವರ ಪತ್ನಿ ಅಮೃತ ಪಟೇಲ್ ನಿಧನ



ದಾವಣಗೆರೆಯ ಕಾನೂನು ತಜ್ಞರೂ,
ರಾ.ಲ. ಕಾನೂನು ಕಾಲೇಜಿನ ನಿವೃತ್ತ ಪ್ರಾಂಶುಪಾಲರೂ ಆಗಿದ್ದ
ದಿ|| ಪ್ರೊ|| ಎಸ್.ಹೆಚ್. ಪಟೇಲ್ ಅವರ ಧರ್ಮಪತ್ನಿ

**ಶ್ರೀಮತಿ ಅಮೃತ ಪಟೇಲ್**

ಅವರು ದಿನಾಂಕ 29-03-2024ರ ಶುಕ್ರವಾರ ರಾತ್ರಿ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅವರು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಾಗಿ ದಾವಣಗೆರೆ ವಿದ್ಯಾನಗರದಲ್ಲಿರುವ ಅವರ ಸ್ವಗೃಹದಲ್ಲಿ ದಿನಾಂಕ 30-03-2024ರ ಶನಿವಾರ ಮಧ್ಯಾಹ್ನ 12 ರವರೆಗೆ ಇರಿಸಲಾಗುವುದು.

ನಂತರ ಸಂಜೆ 4 ಗಂಟೆಗೆ ಚನ್ನಗಿರಿ ತಾಲ್ಲೂಕು ಮೃತರ ಸ್ವಗ್ರಾಮ ಕಾರಿಗನೂರಿನಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಕಾರಿಗನೂರು ಪಟೇಲ್ ಕುಟುಂಬ ಹಾಗೂ
ಬಂಧು-ಮಿತ್ರರು. ಮೊ. : 94489 48122

## ಕಕ್ಕರಗೊಳ್ಳದ ಕಾಡಜ್ಜಿ ಸಿದ್ದಲಿಂಗಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ವಾಸಿ,
ಬಿಜೆಪಿ ಮುಖಂಡರು, ಕಕ್ಕರಗೊಳ್ಳದ ಶ್ರೀ ಆಂಜನೇಯ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷರಾದ

**ಲಿಂ|| ಕಾಡಜ್ಜಿ ಸಿದ್ದಲಿಂಗಪ್ಪನವರು**

ದಿನಾಂಕ : 29.03.2024ರ ಶುಕ್ರವಾರ ಬೆಳಿಗ್ಗೆ 09.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 81 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.03.2024ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಧರ್ಮಪತ್ನಿ : ಶ್ರೀಮತಿ ಗೌರಮ್ಮ ಸಿದ್ದಲಿಂಗಪ್ಪ
ಶ್ರೀಮತಿ ಸುಧಾ ಮತ್ತು ಕಾಡಜ್ಜಿ ಬಸವರಾಜ್, ಶ್ರೀಮತಿ ಜಯಶೀಲ ಮತ್ತು ಕಾಡಜ್ಜಿ ಶಿವಪ್ಪ
ಕಾಡಜ್ಜಿ ವಂಶಸ್ಥರು, ಕಕ್ಕರಗೊಳ್ಳ ಹಾಗೂ ಬಂಧು-ಮಿತ್ರರು
ಮೊ : 99804 57945, 99028 68562, 99725 35743


## ಹುಟ್ಟುಹಬ್ಬದ ಶುಭಾಶಯಗಳು




ಬರಗಾಲದಲ್ಲೂ ಟಿವಿ ಸ್ಟೇಷನ್ ಕೆರೆಗೆ ನೀರು
ತುಂಬಿಸಲು ಶ್ರಮಿಸಿ, ಈ ಭಾಗದ ವಾರ್ಡುಗಳಿಗೆ
ನೀರು ಒದಗಿಸುತ್ತಿರುವ ಜನರ ನೆಚ್ಚಿನ ನಾಯಕ,
33ನೇ ವಾರ್ಡ್ ಅಭಿವೃದ್ಧಿ ಹರಿಕಾರ.
ಮಹಾನಗರ ಪಾಲಿಕೆಯ ಸದಸ್ಯರೂ,
ಯುವ ನಾಯಕ, ರಾಷ್ಟ್ರೀಯ ಕುಸ್ತಿಪಟು,
ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆ
ಶ್ರೀ ಸೋಮೇಶ್ವರ ವಿದ್ಯಾಲಯದ ಖಜಾಂಚಿಗಳು,
ಶ್ರೀ ಸೋಮೇಶ್ವರ ಸೌಹಾರ್ದ ಕೋ.ಆಪ್. ಬ್ಯಾಂಕ್
ನಿರ್ದೇಶಕರು,
ಜಿಲ್ಲಾ ಕುಸ್ತಿ ಫೆಡರೇಷನ್‌ನ ಪ್ರಧಾನ
ಕಾರ್ಯದರ್ಶಿಗಳೂ,
ಸದಾ ಮುಗುಳ್ನಗೆ ಮೂಲಕ ಜನರ ಸಂಕಷ್ಟಗಳಿಗೆ
ಸ್ಪಂದಿಸುವ ನಮ್ಮ ಸ್ನೇಹಿತರೂ ಆದ

**ಪೈಲ್ವಾನ್**
**ಶ್ರೀ ಕೆ.ಎಂ. ವೀರೇಶ್**

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು
ಕರ್ನಾಟಕ ಭಾರತೀಯ ಶೈಲಿ ಕುಸ್ತಿ ಸಂಘ
ಜಿಲ್ಲಾ ವೆಯ್ಟ್ ಲಿಫ್ಟಿಂಗ್ ಅಸೋಸಿಯೇಷನ್
ಎಸ್.ಕೆ. ಇನ್ಫೋ ಸಲ್ಯೂಷನ್ಸ್
ಶ್ರೀ ರಂಗನಾಥ ಸ್ಟೋನ್ ಕ್ರಷರ್ಸ್
ಸಾನ್ವಿ ಮೊಬೈಲ್ ಅಂಡ್ ಆ್ಯಕ್ಸಸರೀಸ್

ಕೆ.ಎಂ. ವೀರೇಶ್ ಅಭಿಮಾನಿಗಳ ಬಳಗ ಹಾಗೂ ಸ್ನೇಹಿತರು.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas